EMAIL : dairyadadaari@gmail.com ಸಂಪುಟ: 01 ಸಂಚಿಕೆ: 50

ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಗುರುವಾರ: 29-01-2026


## ಮಾನ್ವಿ ಕಲಾವಿದ ವಾಜಿದ್ ಸಾಜಿದ್ ಅವರ ಪ್ಲೇನ್ ಏರ್ ಚಿತ್ರಕೃತಿಗಳಿಗೆ ಅಂತಾರಾಷ್ಟ್ರೀಯ ಮೆಚ್ಚುಗೆ



ಧೈರ್ಯದ ದಾರಿ

**ಬೆಂಗಳೂರು.ಜ.28–** ಆರ್ಟ್ ಮಂತ್ರಮ್ ಸಂಸ್ಥೆ, ಬೆಂಗಳೂರು ಇವರ ಆಯೋಜನೆಯಲ್ಲಿ ನಡೆದ ಆರ್ಟ್ ಸಿಂಪೋಸಿಯಂ 2026 ಅಂತಾರಾಷ್ಟ್ರೀಯ ಚಿತ್ರಕಲಾ ಶಿಬಿರದಲ್ಲಿ ಮಾನ್ವಿ ತಾಲೂಕಿನ ಕಲಾವಿದ ವಾಜಿದ್ ಸಾಜಿದ್ ಅವರು ರಚಿಸಿದ ಪ್ಲೇನ್ ಏರ್ (ನೇರ ಸ್ಥಳದಲ್ಲೇ ಬಿಡಿಸಿದ) ಚಿತ್ರಕೃತಿಗಳು ಆಯ್ಕೆಯಾಗಿದ್ದು, ಅವರ ಕಲಾ ಪ್ರತಿಭೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತು ಲಭಿಸಿದೆ.

ವಾಜಿದ್ ಸಾಜಿದ್ ಅವರು ಶಿಬಿರದ ಅವಧಿಯಲ್ಲಿ ಮೂರು ಪ್ರಮುಖ ಸ್ಥಳಗಳಲ್ಲಿ ಪ್ಲೇನ್ ಏರ್ ಚಿತ್ರಕೃತಿಗಳನ್ನು ರಚಿಸಿದ್ದಾರೆ. ಮೊದಲನೆಯದಾಗಿ, ಶ್ರೀರಂಗಪಟ್ಟಣದ ಕಾವೇರಿ ನದಿ ತೀರದಲ್ಲಿ ರಚಿಸಿದ ಕಲಾಕೃತಿಯಲ್ಲಿ ನದಿಯ ಹರಿವು, ಸುತ್ತಲಿನ ಹಸಿರು ಪರಿಸರ ಮತ್ತು ಶಾಂತ ವಾತಾವರಣವನ್ನು ಜೀವಂತವಾಗಿ ಮೂಡಿಸಿದ್ದಾರೆ. ಪ್ರಕೃತಿ ಮತ್ತು ಮಾನವನ ನಡುವಿನ ಅವಿನಾಭಾವ ಸಂಬಂಧವನ್ನು ಈ ಚಿತ್ರ ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ.

ಎರಡನೆಯದಾಗಿ, ಶ್ರೀರಂಗಪಟ್ಟಣದ ಶ್ರೀರಂಗನಾಥ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಬಿಡಿಸಿದ ಚಿತ್ರದಲ್ಲಿ ದೇವಾಲಯದ ಭವ್ಯ ಗೋಪುರ, ವೈಶಿಷ್ಟ್ಯಪೂರ್ಣ ವಾಸ್ತುಶಿಲ್ಪ ಹಾಗೂ ಭಕ್ತಿಮಯ ವಾತಾವರಣವನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಬೆಳಕು ನೆರಳಿನ ಸಮತೋಲನ ಮತ್ತು ಬಣ್ಣಗಳ ಸೌಮ್ಯ ಬಳಕೆ ಈ ಕಲಾಕೃತಿಗೆ ವಿಶಿಷ್ಟ ಆಕರ್ಷಣೆಯನ್ನು ತಂದಿದೆ.

ಮೂರನೆಯದಾಗಿ, ಮೈಸೂರು ಚಾಮುಂಡಿ ಬೆಟ್ಟದಲ್ಲಿ ರಚಿಸಿದ ಕಲಾಕೃತಿಯಲ್ಲಿ ಚಾಮುಂಡೇಶ್ವರಿ ದೇವಿಯ ಶೌರ್ಯ, ದೈವಿಕತೆ ಹಾಗೂ ಆಧ್ಯಾತ್ಮಿಕ ಶಕ್ತಿಯನ್ನು ಕಿತ್ತಳೆ ಮತ್ತು ಕಂದು ಬಣ್ಣಗಳ ಉಜ್ವಲ ಸಂಯೋಜನೆಯ ಮೂಲಕ ಪರಿಣಾಮಕಾರಿಯಾಗಿ ವ್ಯಕ್ತಪಡಿಸಿದ್ದಾರೆ. ಹಿನ್ನೆಲೆಯ ಬೆಟ್ಟ ಮತ್ತು ದೇವಿಯ ಪ್ರತೀಕಾತ್ಮಕ ರೂಪ ಚಿತ್ರಕ್ಕೆ ವಿಶಿಷ್ಟ ತಾಕತ್ತನ್ನು ನೀಡುತ್ತದೆ.

ಈ ಮೂರು ಪ್ಲೇನ್ ಏರ್ ಕಲಾಕೃತಿಗಳ ಮೂಲಕ ವಾಜಿದ್ ಸಾಜಿದ್ ಅವರು ನೇರ ವೀಕ್ಷಣೆಯ ಅನುಭವ, ಬಣ್ಣಗಳ ನಿಖರ ಬಳಕೆ ಹಾಗೂ ವಿಷಯದ ಆಯ್ಕೆಯಲ್ಲಿ ತಮ್ಮ ಕಲಾ ಪಾಕ್ವತೆಯನ್ನು ಪ್ರದರ್ಶಿಸಿದ್ದು, ಅಂತಾರಾಷ್ಟ್ರೀಯ ಕಲಾವಿದರ ನಡುವೆ ಮಾನ್ವಿ ಕಲೆಗೆ ಗೌರವ ತಂದುಕೊಟ್ಟಿದ್ದಾರೆ. ಸ್ಥಳೀಯ ಕಲಾಸಕ್ತರು ಹಾಗೂ ಸಾರ್ವಜನಿಕರು ವಾಜಿದ್ ಸಾಜಿದ್ ಅವರಿಗೆ ಅಭಿನಂದನೆ ಸಲ್ಲಿಸಿ, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡುವಂತೆ ಶುಭ ಹಾರೈಸಿದ್ದಾರೆ.

ಪೌರ ಕಾರ್ಮಿಕರಿಗೆ ಸ್ವಚ್ಛತೆಯ ಪಾಠ ಮಾಡಿದ ಆಯುಕ್ತರು

## ಉತ್ಸವದಲ್ಲಿ ರಾಯಚೂರು ಸಿಟಿ ಸುಂದರವಾಗಿ ಕಾಣಲಿ: ಜುಬಿನ್ ಮೊಹಪಾತ್ರ




ಧೈರ್ಯದ ದಾರಿ

**ರಾಯಚೂರು,ಜ.28–**ಉತ್ಸವವು ಯಶಸ್ವಿಯಾಗಿ ನಡೆಯುವ ನಿಟ್ಟಿನಲ್ಲಿ ರಾಯಚೂರು ಸಿಟಿಯು ಸುಂದರವಾಗಿ ಕಾಣಬೇಕು. ಈ ದಿಶೆಯಲ್ಲಿ ಯೋಚಿಸಿ ಪ್ರತಿಯೊಬ್ಬ ಪೌರ ಕಾರ್ಮಿಕರು ಸ್ವಚ್ಛತಾ ಕಾರ್ಯದಲ್ಲಿ ಸಕ್ರಿಯ ಭಾಗಿಯಾಗಬೇಕು ಎಂದು ರಾಯಚೂರು ಮಹಾನಗರ ಪಾಲಿಕೆ ಆಯುಕ್ತರಾದ ಜುಬಿನ್ ಮೋಹಪಾತ್ರ ಅವರು ಹೇಳಿದರು. ನಗರದ ಜೈಲ್‌ಖಾನ್ ಬಳಿಯಲ್ಲಿರುವ ಮಹಿಳಾ ಸಮಾಜ ಮೈದಾನದಲ್ಲಿ ಜನವರಿ 28ರಂದು ಪೌರ ಕಾರ್ಮಿಕರ ಸಭೆ ನಡೆಸಿ ಅವರು ಮಾತನಾಡಿದರು.

ಶುಚಿತ್ವ ಇದ್ದಲ್ಲಿ, ಶಿಸ್ತು ಇದ್ದಲ್ಲಿ ಶಾಂತಿ ಇರುತ್ತದೆ. ಈ ದಿಶೆಯಲ್ಲಿ ನಾವೆಲ್ಲರೂ ಯೋಚಿಸಿ ಉತ್ಸವದ ನಿಗದಿಯಾದ ಈ ಸಂದರ್ಭದಲ್ಲಿ ನಮ್ಮ ನಮ್ಮ ಮನೆ, ಮನೆಯ ಸುತ್ತಲಿನ ಪರಿಸರ, ರಸ್ತೆ, ಗಟಾರು, ಸಾರ್ವಜನಿಕ ಸ್ಥಳಗಳು ಸೇರಿದಂತೆ ವಿವಿಧೆಡೆಯಲ್ಲಿ ಶುಚಿತ್ವಕ್ಕೆ ಒತ್ತು ಕೊಡಬೇಕು. ರಾಯಚೂರು ಜಿಲ್ಲಾ ಉತ್ಸವಕ್ಕೆ ಅತಿಥಿಗಳಾಗಿ ಆಮಿಸುವ ಜನತೆಗೆ ರಾಯಚೂರು ನಗರವು ಸುಂದರವಾಗಿ ಕಾಣುವಂತಾಗಬೇಕು. ಜನತೆಗೆ ಸ್ವಚ್ಛತೆಯ ಸಂದೇಶ ರವಾನೆಯಾಗಬೇಕು. ರಾಯಚೂರ ನಗರವನ್ನು ಸ್ವಚ್ಛ ನಗರ ವೆಂದು ಜನರು ಕೊಂಡಾಡುವಂತೆ ಮಾಡುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಆಯುಕ್ತರು ಪೌರ ಕಾರ್ಮಿಕರಿಗೆ ಸ್ವಚ್ಛತೆಯ ಪಾಠ ಮಾಡಿದರು.

ರಾಯಚೂರು ಉತ್ಸವಕ್ಕೆ ಇನ್ನು ಒಂದು ವಾರ ಮಾತ್ರ ಬಾಕಿ ಇದೆ. ಈಗಾಗಲೇ ನಗರದಲ್ಲಿ ಕಸ ಸಂಗ್ರಹ ಸ್ಥಳಗಳಲ್ಲಿ ನಿತ್ಯ ಕಸ ವಿಲೆವಾರಿ ನಡೆಯುತ್ತಿದೆ. ನಿತ್ಯ ಮನೆ ಮನೆ ಕಸ ಸಂಗ್ರಹ, ಕಾರ್ಖಾನೆ, ಆಸ್ಪತ್ರೆ ಸೇರಿದಂತೆ ಎಲ್ಲಾ ಕಡೆಗಳಲ್ಲಿ ಕಸ ವಿಲೇವಾರಿ ನಡೆಯುತ್ತಿದೆ. ಬೇರೆ ಬೇರೆ ಕಡೆಗಳಲ್ಲಿ ಸ್ವಚ್ಚತೆ ಕಾಣಲಾರಂಭಿಸಿದೆ. ಈ ಕೆಲಸ ನಿರಂತರ ಮುಂದುವರೆಯಬೇಕು ಎಂದು ಸೂಚನೆ ನೀಡಿದರು.ಉತ್ಸವಕ್ಕೂ ಮುಂಚಿತವಾಗಿ ಪ್ರತಿಯೊಬ್ಬರು ಸ್ವಚ್ಚತೆಯ ಕಡೆಗೆ ಮೊದಲ ಆದ್ಯತೆ ನೀಡಬೇಕು. ರಾಜ್ಯ, ಅಂತಾರಾಜ್ಯ, ಮಟ್ಟದ ಕಲಾವಿದರು ಮೊದಲ ಬಾರಿಗೆ ಜಿಲ್ಲೆಗೆ ಆಗಮಿಸಲಿದ್ದಾರೆ. ಅವರಿಗೆ ರಾಯಚೂರು ಸ್ವಚ್ಚ ನಗರವೆಂದು ತೋರಿಸಿಕೊಡಬೇಕಾಗಿದೆ. ಪ್ರಮುಖವಾಗಿ ಮುಖ್ಯ ರಸ್ತೆಗಳು, ಮುಖ್ಯ ರಸ್ತೆಗಳಲ್ಲಿರುವ ರಾಜ ಕಾಲುವೆಗಳಿಂದ ದುರ್ವಾಸನೆ ಬೀರದಂತೆ ಬೀಚಿಂಗ್ ಪೌಡರ್ ಸಿಂಪಡಣೆ ಮಾಡಬೇಕು.2ನೇಪುಟಕ್ಕೆ►

## ರಾಯಚೂರು ಉತ್ಸವದ ವಿವಿಧ ಸಮಿತಿಗಳ ಸದಸ್ಯರ ಅಭಿಮತ ರಾಯಚೂರು ಉತ್ಸವದ ಕಾರ್ಯಕ್ಕೆ ನಾವೂ ಕೈ ಜೋಡಿಸುತ್ತೇವೆ

ಧೈರ್ಯದ ದಾರಿ

**ರಾಯಚೂರು,ಜ.28–** ರಾಯಚೂರು ಜಿಲ್ಲಾ ಉತ್ಸವದ ನೂತನ ವಿವಿಧ ಸಮಿತಿಗಳ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಮತ್ತು ಸದಸ್ಯರ ಹಾಗೂ ಸಮನ್ವಯ ಅಧಿಕಾರಿಗಳ ಸಭೆಯು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರ ಅಧ್ಯಕ್ಷತೆಯಲ್ಲಿ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನವರಿ 28ರಂದು ನಡೆಯಿತು.

ಈ ಸಭೆಯಲ್ಲಿ ಭಾಗಿಯಾಗಿದ್ದ ಹಿರಿಯ ರೈತ ಮುಖಂಡರಾದ ಚಾಮರಸ ಪಾಟೀಲ, ಕರ್ನಾಟಕ ಸಂಘದ ಅಧ್ಯಕ್ಷರಾದ ಕೆ.ಶಾಂತಪ್ಪ, ಹೋರಾಟಗಾರರಾದ ಬಸವರಾಜ ಕಳಸ ಸೇರಿದಂತೆ ಇನ್ನಿತರರು ಮಾತನಾಡಿ, ರಾಯಚೂರು ಜಿಲ್ಲಾ ಉತ್ಸವದ ಮೊದಲನೇ ಸಾರ್ವಜನಿಕ ಸಭೆಯಲ್ಲಿ ಕೇಳಿ ಬಂದ ಬಲವಾದ ಅಭಿಪ್ರಾಯದಂತೆ ಜಿಲ್ಲಾಡಳಿತವು ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಗಣ್ಯರು ಮತ್ತು ಇನ್ನಿತರ ಮಹನಿಯರ ಒಳಗೊಂಡು ಹೊಸ ಸಮಿತಿಗಳನ್ನು ರಚಿಸಿದ್ದು ಅತ್ಯಂತ ಸ್ವಾಗತಾರ್ಹ ಕ್ರಮವಾಗಿದೆ. ಈ ಸಮಿತಿಯ ಸದಸ್ಯರಾದ ನಾವು ಉತ್ಸವದ ಕಾರ್ಯದಲ್ಲಿ ಭಾಗಿಯಾಗುತ್ತೇವೆ. ಈ ಸಮಿತಿಗಳಲ್ಲಿನ ಅಧಿಕಾರಿಗಳು ನಮ್ಮೆಲ್ಲರನ್ನು ವಿಶ್ವಾಸಕ್ಕೆ ಪಡೆದು ಕಾರ್ಯನಿರ್ವಹಿಸಬೇಕು ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಮೊದಲಿಗೆ ವಿವಿಧ ಸಮಿತಿಗಳಲ್ಲಿ ಸದಸ್ಯರು ಉತ್ಸವದ ಕುರಿತು ನಾನಾ ಸಲಹೆ ನೀಡಿದರು. ರಾಯಚೂರು ಉತ್ಸವದ ನಿಮಿತ್ತ ಜಿಲ್ಲಾಡಳಿತವು ಜ್ಯೋತಿ ರಥಯಾತ್ರೆ ಕಾರ್ಯಕ್ರಮ



ಹಮ್ಮಿಕೊಂಡಿದ್ದು ಉತ್ತಮ ಪ್ರಯತ್ನವಾಗಿದೆ. ಈ ಕಾರ್ಯಕ್ರಮದಲ್ಲಿ ಶಾಲಾ ಕಾಲೇಜಿನ ವಿದ್ಯಾರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಬೇಕು ಎಂದು ಕರ್ನಾಟಕ ಸಂಘದ ಕೆ.ಶಾಂತಪ್ಪ ಅವರು ಸಲಹೆ ಮಾಡಿದರು.

ಉತ್ಸವದಲ್ಲಿ ಪ್ಲಾಸ್ಟಿಕ್ ಬಳಕೆ ಮಾಡಬಾರದು ಎಂದು ರೈತ ಸಂಘದ ಮುಖಂಡರದ ಅನಿತಾ ಅವರು ಸಲಹೆ ಮಾಡಿದರು. ರಸ್ತೆಗಳಲ್ಲಿ ಅಳವಡಿಸಿದ ಅಲಂಕೃತ ಬಟ್ಟೆಯನ್ನು ಸರಿಪಡಿಸಬೇಕು ಎಂದು ಕನ್ನಡಪರ ಸಂಘಟನೆಯ ಅಶೋಕ ಜೈನ್ ಅವರು ತಿಳಿಸಿದರು.

ಉತ್ಸವಕ್ಕೆ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳ ಸಹಕಾರ ಪಡೆದುಕೊಳ್ಳಲು ಹೊಸ ಸಮಿತಿಗಳನ್ನು 2ನೇಪುಟಕ್ಕೆ►



● ಲೇಖನ ●

ದುಷ್ಟರೆಲ್ಲಾ ಒಂದೆಡೆ ಸೇರಿದಾಗ ಸಜ್ಜನರೂ ಕೂಡಾ ಒಗ್ಗೂಡಲೇಬೇಕು. ಇಲ್ಲದಿದ್ದರೆ ಕೆಟ್ಟವರು ಒಳ್ಳೆಯವರನ್ನು ಒಬ್ಬೊಬ್ಬರನ್ನೇ ನಾಶ ಮಾಡುತ್ತಾ ಹೋಗುತ್ತಾರೆ.

–(ಸೈಯದ್ ತಾಜುದ್ದೀನ್)


ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626


## ಶ್ರೀಮನ್ ಮಧ್ವಾಚಾರ್ಯರ 710 ನೇ ಜಯಂತಿ ಆಚರಣೆ

ಧೈರ್ಯದ ದಾರಿ

**ಮಾನ್ವಿ,ಜ.28–** ಪಟ್ಟಣದ ಶ್ರೀ ಜಗನ್ನಾಥ ದಾಸರ ಸನ್ನಿಧಾನದಲ್ಲಿ ಶ್ರೀಮನ್ ಮಧ್ವಾಚಾರ್ಯರ 710 ನೇ ಜಯಂತಿ ಅಂಗವಾಗಿ ಮದ್ವನವಮಿಯನ್ನು ಭಕ್ತಿ ಭಾವದಿಂದ ಆಚರಿಸಲಾಯಿತುಬೆಳಿಗ್ಗೆ 5ಕ್ಕೆ ಸುಪ್ರಭಾತ, ಹರಿಕಥಾಮೃತಸಾರ ಪಾರಾಯಣ, ಪವಮಾನ ಹೋಮ , ರಾಯರ ಅಷ್ಟೋತ್ತರ, ಶ್ರೀ ಜಗನ್ನಾಥ ದಾಸರ ಕಂಬ ಸ್ಥಂಭಕ್ಕೆ ನಿರ್ಮಾಲ್ಯ ವಿಸರ್ಜನೆ,ಪ್ರತಿಮಾಪೂಜೆ ಮತ್ತು ಫಲ ಪಂಚಾಮೃತ ಸೇವೆ ಅಷ್ಟೋತ್ತರ ನೆರವೇರಿಸಲಾಯಿ ತು. ಶ್ರೀ ಮನ್ ಮಧ್ವಾಚಾರ್ಯರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.ಪಟ್ಟಣದ ರಾಜಬೀದಿಯಲ್ಲಿ ದಾಸಾರ್ಯ ಮಹಿಳಾ ಭಜನ ಮಂಡಳಿ ಹಾಗೂ ಪವನ ಭಜನಾ ಮಂಡಳಿಗಳಿಂದ ತಾರತಮ್ಯ ಭಜನೆಯೊಂದಿಗೆ ಪಲ್ಲಕ್ಕಿ ಶ್ರೀ ಮಧ್ವಾಚಾರ್ಯರ ಭಾವಚಿತ್ರ, ಸರ್ವ ಮೂಲ ಗ್ರಂಥಗಳ ಮೆರವಣಿಗೆ ನಡೆಯಿತು.



ಕಾರ್ಯಕ್ರಮದಲ್ಲಿ ಬ್ರಾಹ್ಮಣ ಸಮಾಜದ ಅಧ್ಯಕ್ಷ ಮುದ್ದುರಂಗರಾವ ಮುತಾಲಿಕ,ಸೇರಿದಂತೆ ಟಿ.ಭೀಮಸೇನರಾವ,ನರಸಿಂಹಾಚಾರ್ಯ ಜಾನೇಕಲ್,ಜಗನ್ನಾಥ ರಾಮಪೂರ,ಶ್ರೀಧರ ಮಾಸ್ಟರ್,ನರಸಿಂಹ ಅಪೂಟ್,ಪ್ರಲ್ಹಾದ ಕುರ್ಡಿ,ಜಯಚಾರ್ಯ ಮಠದ್,ಗೋಪಾಲ ಕಿರಸೂರ,ಜಗನ್ನಾಥ ಪುರೋಹಿತ,ಗಿರೀಶ ತುರ್ವಿಹಾಳ,ಮ್ಯಾನೇಜರ ಶ್ರೀನಿವಾಸರಾವ್ ಕೊರ್ಲಹಳ್ಳಿ, ಅರ್ಚಕ ಪ್ರಲ್ಹಾದಾಚಾರ್ಯ ಸೇರಿದಂತೆ ತಾಲೂಕ ಬ್ರಾಹ್ಮಣ ಸಮಾಜ ಹಾಗೂ ಅರ್ಯುವೈಶ್ಯ ಸಮಾಜದವರು ಸೇರಿದಂತೆ ಭಕ್ತರು ಭಾಗವಹಿಸಿದರು.

## ಜಿಲ್ಲೆಯಲ್ಲೇ ಮೊದಲು: ಪಟ್ಟಣ ಪಂಚಾಯತ್ ಕ್ರಾಂತಿಕಾರಿ ಹೆಜ್ಜೆ, ಡಿಜಿಟಲ್ ಖಾತೆ ವಿತರಣೆ ಆರಂಭ.

ಧೈರ್ಯದ ದಾರಿ



**ಸಿರವಾರ,ಜ.28–** ಸಿರವಾರ ಸಾರ್ವಜನಿಕರಿಗೆ ನಾಗರಿಕ ಸೇವೆಗಳನ್ನು ಮತ್ತಷ್ಟು ಸರಳಗೊಳಿಸುವ ನಿಟ್ಟಿನಲ್ಲಿ ಪಟ್ಟಣ ಪಂಚಾಯತ್ ಮಹತ್ವದ ಮೈಲಿಗಲ್ಲು ಸ್ಥಾಪಿಸಿದೆ. ಜಿಲ್ಲೆಯಲ್ಲಿಯೇ ಮೊದಲ ಬಾರಿಗೆ ಕರ್ನಾಟಕ ಒನ್ (Karnataka One) ಕೇಂದ್ರದ ಮೂಲಕ ಅಧಿಕೃತವಾಗಿ 'ಇ–ಖಾತೆ'ಯನ್ನು ನೋಂದಣಿ ಮಾಡಿ ಸಾರ್ವಜನಿಕರಿಗೆ ವಿತರಿಸುವ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಲಾಗಿದೆ ಎಂದು ಪಟ್ಟಣ ಪಂಚಾಯತ್ ಮುಖ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಖಾತೆ ವಿತರಣೆಯಲ್ಲಿ ಡಿಜಿಟಲ್ ಕ್ರಾಂತಿ

ಈ ಹಿಂದೆ ಸಾರ್ವಜನಿಕರು ಖಾತೆ ಬದಲಾವಣೆ ಅಥವಾ ಹೊಸ ಖಾತೆಗಾಗಿ ಪಟ್ಟಣ ಪಂಚಾಯಿತಿ ಕಚೇರಿಗೆ ಪದೇ ಪದೇ ಭೇಟಿ ನೀಡಬೇಕಿತ್ತು. ಇದರಿಂದ ಸಮಯದ ವ್ಯಯ ಮತ್ತು ಕೆಲಸದಲ್ಲಿ ವಿಳಂಬವಾಗುತ್ತಿತ್ತು. ಈಗ ಈ ಸೇವೆಯನ್ನು ಕರ್ನಾಟಕ ಒನ್ ಕೇಂದ್ರಗಳಿಗೆ ವಿಸ್ತರಿಸಲಾಗಿದ್ದು, ನಾಗರಿಕರು ತಮ್ಮ ಮನೆಗೆ ಹತ್ತಿರವಿರುವ ಕೇಂದ್ರಗಳಲ್ಲಿಯೇ ಅಗತ್ಯ ದಾಖಲೆಗಳನ್ನು ನೀಡಿ ಡಿಜಿಟಲ್ ಸಹಿ ಇರುವ ಇ–ಖಾತೆಯನ್ನು ಪಡೆದುಕೊಳ್ಳಬಹುದಾಗಿದೆ. ಮುಖ್ಯ ಅಧಿಕಾರಿ ಸುರೇಶ್ ಶೆಟ್ಟಿ ಅವರ ಹೇಳಿಕೆ

ಸುದ್ದಿಗಾರರೊಂದಿಗೆ ಮಾತನಾಡಿದ ಸುರೇಶ್ ಶೆಟ್ಟಿ ಅವರು, "ಸಾರ್ವಜನಿಕರಿಗೆ ಪಾರದರ್ಶಕ ಮತ್ತು ವೇಗದ ಸೇವೆ ನೀಡುವುದೇ ನಮ್ಮ ಪ್ರಮುಖ ಉದ್ದೇಶ. ಕರ್ನಾಟಕ ಒನ್ ಕೇಂದ್ರಗಳ ಮೂಲಕ ಖಾತೆ ವಿತರಿಸುವ ಪ್ರಕ್ರಿಯೆಯ ಪ್ರಾಯೋಗಿಕ ಹಂತ ಅತ್ಯಂತ ಯಶಸ್ವಿಯಾಗಿದೆ. ತಾಂತ್ರಿಕ ಅಡೆತಡೆಗಳನ್ನು ಸಂಪೂರ್ಣವಾಗಿ ನಿವಾರಿಸಲಾಗಿದ್ದು, ಜನರು ಈ ಡಿಜಿಟಲ್ ಸೇವೆಯು ಸದುಪಯೋಗ ಪಡಿಸಿಕೊಳ್ಳಬೇಕು" ಎಂದು ಮನವಿ ಮಾಡಿದರು.

2ನೇಪುಟಕ್ಕೆ►

**ಮೊದಲನೇ ಪುಟದಿಂದ**

ಪೌರ ಕಾರ್ಮಿಕರಿಗೆ ಸ್ವಚ್ಛತೆಯ ಪಾಠ ಮಾಡಿದ ಆಯುಕ್ತರು

# ಉತ್ಸವದಲ್ಲಿ ರಾಯಚೂರು ಸಿಟಿ ಸುಂದರವಾಗಿ ಕಾಣಲಿ: ಜುಬಿನ್ ಮೊಹಪಾತ್ರ

ಯಾವುದೇ ಕಡೆಗಳಲ್ಲಿ ಕಸ ಕಾಣಿಸಬಾರದು. ಉತ್ಸವ ಕಾರ್ಯಕ್ರಮಗಳು ನಿಗದಿಯಾದ ಶ್ರೀ ಪಂಡಿತ ಸಿದ್ಧರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರ, ಜೈಲ್ ಖಾನ್ ಬಳಿಯ ಮಹಿಳಾ ಸಮಾಜ ಆವರಣ, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ವಾಲ್‌ಕಟ್ ಮೈದಾನ, ಜಿಲ್ಲಾ ಕ್ರೀಡಾಂಗಣದ ಒಳಾಂಗಣ ಮತ್ತು ಹೊರಾಂಗಣದಲ್ಲಿ ಈಗಿನಿಂದಲೇ ಶುಚಿತ್ವ ಕಾರ್ಯ ನಡೆಯಬೇಕು. ಈ ಎಲ್ಲ ಕಡೆಗೆ ಸಹ ಪ್ರತಿ ದಿನ ಶುಚಿತ್ವ ಕಾರ್ಯವಾಗಬೇಕು ಎಂದು ಆಯುಕ್ತರು ಸೂಚನೆ ನೀಡಿದರು. ಬೇರೆ ಬೇರೆ ಕಡೆಗಳಲ್ಲಿ ಫಾಗಿಂಗ್ ಮಾಡಬೇಕು. ಎಲ್ಲೆಂದರಲ್ಲಿ ಕಸ ಎಸೆಯದಂತೆ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಮೈಸೂರು, ಮಂಗಳೂರು ಸೇರಿದಂತೆ ಕೆಲ ನಗರಗಳು ಸ್ವಚ್ಛತೆಗೆ ಹೆಸರುವಾಸಿಯಾಗಿದೆ. ಅವುಗಳ ಸಾಲಿನಲ್ಲಿ ರಾಯಚೂರು ಸಹ ಸೇರುವ ಹಾಗೆ ರಾಯಚೂರನ್ನು ಸ್ವಚ್ಚ ನಗರವೆಂದು ತೋರಿಸಿಕೊಡಲು ರಾಯಚೂರು ಉತ್ಸವ ಒಂದು ಅವಕಾಶವಾಗಿದ್ದು, ಇದನ್ನು ಸವಾಲಾಗಿ ಸ್ವೀಕರಿಸಿ ಕೆಲಸ ಮಾಡಬೇಕು. ಪ್ರತಿಯೊಬ್ಬರು ಸ್ವಚ್ಛತೆಯ ಕಾರ್ಯವನ್ನು ನಮ್ಮ ಮನೆಯ ಕೆಲಸವೆಂದು ಭಾವಿಸಿ ಜವಾಬ್ದಾರಿ ತೆಗೆದುಕೊಳ್ಳಬೇಕು. ಆಗ ಮಾತ್ರ ಸ್ವಚ್ಚ ನಗರ ಸಾಲಿನಲ್ಲಿ ನಮ್ಮ ಜಿಲ್ಲೆ ಗುರುತಿಸಲು ಸಾಧ್ಯವಾಗುತ್ತದೆ ಎಂದರು.

ಪೌರ ಕಾರ್ಮಿಕರ ಮೇಲೆ ಸರಿಯಾಗಿ ಮೇಲ್ವಿಚಾರಣೆ ಮಾಡಲು ಇದೆ ವೇಳೆ ಆಯುಕ್ತರು, ಪಾಲಿಕೆಯ ಪರಿಸರ ಅಭಿಯಂತರರು ಮತ್ತು ಪರಿಸರ ನಿರೀಕ್ಷರಿಗೆ ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ಪರಿಸರ ವಿಭಾಗದ ಅಭಿಯಂತರರಾದ ಜೈಪಾಲ್ ರೆಡ್ಡಿ, ಉಪ ಆಯುಕ್ತರಾದ ಮಲ್ಲಿಕಾರ್ಜುನ ಸೇರಿದಂತೆ ಪೌರ ಕಾರ್ಮಿಕರು, ಪಾಲಿಕೆಯ ವಿವಿಧ ಅಧಿಕಾರಿಗಳು ಇದ್ದರು.

# ಜಿಲ್ಲೆಯಲ್ಲೇ ಮೊದಲು: ಪಟ್ಟಣ ಪಂಚಾಯತ್ ಕ್ರಾಂತಿಕಾರಿ ಹೆಜ್ಜೆ, ಡಿಜಿಟಲ್ ಖಾತೆ ವಿತರಣೆ ಆರಂಭ.

**ಖಾತೆ ಪಡೆಯಲು ಬೇಕಾಗುವ ಪ್ರಮುಖ ದಾಖಲೆಗಳು:**

ಸಾರ್ವಜನಿಕರು ಕರ್ನಾಟಕ ಒನ್ ಕೇಂದ್ರಕ್ಕೆ ಭೇಟಿ ನೀಡುವಾಗ ಈ ಕೆಳಗಿನ ದಾಖಲೆಗಳನ್ನು ಮೂಲಪ್ರತಿಯೊಂದಿಗೆ ತರಲು ಸೂಚಿಸಲಾಗಿದೆ:

ಆಸ್ತಿಯ ನೋಂದಾಯಿತ ಕ್ರಯ ಪತ್ರ (Sale Deed).ಇತ್ತೀಚಿನ ಆಸ್ತಿ ತೆರಿಗೆ ಪಾವತಿಸಿದ ರಸೀದಿ. ಮಾಲೀಕರ ಆಧಾರ್ ಕಾರ್ಡ್ ಪ್ರತಿ. ಆಸ್ತಿಯ ಹಳೆಯ ಖಾತೆ ಅಥವಾ ಫಾರಂ–3 (ಲಭ್ಯವಿ ದ್ದಲ್ಲಿ).ಮಾಲೀಕರ ಇತ್ತೀಚಿನ ಭಾವಚಿತ್ರ ಮತ್ತು ಮೊಬೈಲ್ ಸಂಖ್ಯೆ

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ನೂತನ ಅಧ್ಯಕ್ಷರಾದ ಹಾದಿ ಚೌದರಿ. ಪಟ್ಟಣ ಪಂಚಾಯತ್ ಸದಸ್ಯರಾದ ಸೂರಿ ದುರ್ಗಣ್ಣ. ಮಾರ್ಕಂಡಪ್ಪ ಹಾಗೂ ಪಟ್ಟಣ ಪಂಚಾಯಿತಿ ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು

# ರಾಯಚೂರು ಉತ್ಸವದ ವಿವಿಧ ಸಮಿತಿಗಳ ಸದಸ್ಯರ ಅಭಿಮತ ರಾಯಚೂರು ಉತ್ಸವದ ಕಾರ್ಯಕ್ಕೆ ನಾವೂ ಕೈ ಜೋಡಿಸುತ್ತೇವೆ

ರಚಿಸಿದ್ದು ಅತ್ಯಂತ ಸ್ವಾಗತಾರ್ಹ ಕ್ರಮವಾಗಿದೆ. ಈ ಸಮಿತಿಗಳಲ್ಲಿನ ಅಧಿಕಾರಿಗಳು ನಮಗೆ ಸಂಪರ್ಕಿಸಿ ಆಯಾ ಸಮಿತಿಗಳ ಹಂತದಲ್ಲಿ ಮೇಲಿಂದ ಮೇಲೆ ಸಭೆಗಳು ನಡೆದು ಕೆಲಸ ಹಂಚಿಕೆ ಕಾರ್ಯವಾಗಬೇಕು ಎಂದು ಮತಮಾರಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಹುಸೇನ್ ಅವರು ಸಲಹೆ ಮಾಡಿದರು.

ಉತ್ಸವದಲ್ಲಿ ಬಹಳಷ್ಟು ಜನರು ಸೇರಲಿದ್ದು ಸಾಮಾನ್ಯ ಜನರು ಸಹ ಖರೀದಿಸಿ ಉಪಹಾರ ಊಟ ಮಾಡಲು ಅನುಕೂಲವಾಗುವಂತೆ ಕಡಿಮೆ ದರವನ್ನು ನಿಗದಿಪಡಿಸಬೇಕು ಎಂದು ಮುಖಂಡರಾದ ವಸಂತಕುಮಾರ ಅವರು ಸಭೆಗೆ ಸಲಹೆ ಮಾಡಿದರು.
ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳ ಬ್ಯಾನರ್ ಸಹ ಉತ್ಸವದಲ್ಲಿ ಅಳವಡಿಸಿ ಜನತೆಗೆ ಸ್ವಾಗತ ಕೋರಲು ಅನುವು ಮಾಡಿಕೊಡಬೇಕು ಎಂದು ರವಿ ಜಲ್ದಾರ ಅವರು ತಿಳಿಸಿದರು.
ಉತ್ಸವದಲ್ಲಿ ಭಾಗಿಯಾಗುವ ಜನತೆಗೆ ಆರೋಗ್ಯದಲ್ಲಿ ಏನಾದರು ಏರುಪೇರುಗಳಾದಲ್ಲಿ ಕೂಡಲೇ ಚಿಕಿತ್ಸೆ ಸಿಗುವ ಹಾಗೆ ಉತ್ಸವದ ವಿವಿಧ ಸ್ಥಳದಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರೆಯಬೇಕು ಎಂದು ಶಶಿಕಲಾ ಭೀಮರಾಯ ಅವರು ಸಲಹೆ ಮಾಡಿದರು.
ಗ್ರಾಮೀಣ ಭಾಗದಲ್ಲಿನ ಜನತೆಗೂ ಉತ್ಸವದ ಮಾಹಿತಿ ದೊರಕಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲ ಗ್ರಾಮಗಳ ಬಸ್ ನಿಲ್ದಾಣ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಉತ್ಸವದ ಬ್ಯಾನರ್ ಅಳವಡಿಸಿ ಪ್ರಚಾರ ನಡೆಸಬೇಕು ಎಂದು ಶ್ರೀದೇವಿ ನಾಯಕ ಅವರು ಸಲಹೆ ಮಾಡಿದರು.

ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಮಾತನಾಡಿ, ರಾಯಚೂರು ಜಿಲ್ಲಾ ಉತ್ಸವಕ್ಕೆ ಜಿಲ್ಲೆಯ ಎಲ್ಲ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಇನ್ನಿತರರು ಕೈಜೋಡಿಸಿ ಸಹಕಾರ ನೀಡಬೇಕು. ಉತ್ಸವದ ಸಿದ್ಧತೆಯು ಈಗಾಗಲೇ ಶೇ.80ರಷ್ಟು ಪೂರ್ಣವಾಗಿದೆ. ಸಾರ್ವಜನಿಕರೊಂದಿಗೆ ನಡೆಸಿದ ಮೊದಲನೇ ಸಭೆಯಲ್ಲಿ ಕೇಳಿ ಬಂದ ಎಲ್ಲ ಸಲಹೆಗಳನ್ನು ನಾವು ಪರಿಗಣಿಸಿ ಕಾರ್ಯಗತ ಮಾಡಿದ್ದೇವೆ. ಈಗ ಉತ್ಸವಕ್ಕೆ ವಾರದ ಸಮಯವಷ್ಟೇ ಉಳಿದಿದೆ. ಸಂಘ ಸಂಸ್ಥೆಗಳ ಪ್ರತಿನಿಧಿಗಳು, ನಾಗರಿಕರು, ಗಣ್ಯರು, ಬುದ್ಧಿ ಜೀವಿಗಳು, ಸಾಹಿತಿಗಳು, ಕಲಾವಿದರು ಮತ್ತು ಇನ್ನಿತರ ಬೇರೆ ಬೇರೆ ವರ್ಗದವನ್ನು ಉತ್ಸವದ ವಿವಿಧ ಸಮಿತಿಗೆ ಸೇರಿಸಿದ್ದೇವೆ. ಆಯಾ ಸಮಿತಿಗಳಲ್ಲಿನ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಹಾಗೂ ಸಮನ್ವಯ ಅಧಿಕಾರಿಗಳು ತಮ್ಮ ಹಂತದಲ್ಲಿ ಸಭೆ ಕರೆದು ಚರ್ಚಿಸಿ ಉತ್ಸವದ ಬೇರೆ ಬೇರೆ ಕಾರ್ಯಗಳ ಹಂಚಿಕೆ ಮಾಡಿಕೊಂಡು ಉತ್ಸವದ ಯಶಸ್ವಿಗೆ ಸಹಕಾರ ನೀಡಬೇಕು ಎಂದು ಕೋರಿದರು.

ಜನರ ಸುರಕ್ಷತೆಗಾಗಿ ಕ್ರಮ: ಉತ್ಸವದಲ್ಲಿ ಯಾವುದೇ ರೀತಿಯಲ್ಲಿ ಕಳ್ಳತನಗಳು ಆಗದಂತೆ ಮತ್ತು ಅವಘಡಗಳು ನಡೆಯದಂತೆ ನೋಡಿಕೊಳ್ಳಲು ಮುಂಜಾಗ್ರತಾ ಕ್ರಮವಾಗಿ ನಗರದ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಅಳವಡಿಕೆ ಕಾರ್ಯ ನಡೆದಿದೆ ಎಂದು ರಾಯಚೂರು ಡಿವೈಎಸ್ಪಿ ಶಾಂತಮೂರ್ತಿ ಅವರು ಸಭೆಗೆ ಮಾಹಿತಿ ನೀಡಿದರು.
ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ಲಿಂಗಸುಗೂರು ಸಹಾಯಕ ಆಯುಕ್ತರಾದ ಬಸವಣೆಪ್ಪ ಕಲಶೆಟ್ಟಿ, ರಾಯಚೂರು ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಸಂತೋಷ ರಾಣಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಇದ್ದರು.

## ಆಹಾರ ಇಲಾಖೆಯಲ್ಲಿ ಶಿವಪ್ಪ ಹಳ್ಳಿಹೊಸೂರು ಶಾಮೀಲಾಗಿರುವುದಿಲ್ಲ :ರಾಮಣ್ಣ ನಾಯಕ ಜಿಲ್ಲಾಧ್ಯಕ್ಷರು ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ರಾಯಚೂರು ಸ್ಪಷ್ಟನೆ

ಧೈರ್ಯದ ದಾರಿ



**ಮಾನ್ವಿ.ಜ.28–**ಆಹಾರ ಇಲಾಖೆಯಲ್ಲಿ ಶಿವಪ್ಪ ಹಳ್ಳಿ ಹೊಸೂರು ಶಾಮೀಲಾಗಿರುವುದಿಲ್ಲ.ಹನುಮೇಶನಾಯಕರವರು ಉದ್ದೇಶ ಪೂರ್ವಕವಾಗಿ ಅವರ ಹೆಸರಿಗೆ ಕಳಂಕ ತರುವ ಕೆಲಸವನ್ನು ಮಾಡುತ್ತಿದ್ದಾರೆ ಎಂದು ರಾಮಣ್ಣ ನಾಯಕ ಜಿಲ್ಲಾಧ್ಯಕ್ಷರು ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ರಾಯಚೂರು ಇವರು ಈ ಪತ್ರಿಕೆಯ ಮೂಲಕ ತಿಳಿಸಿದ್ದಾರೆ.ಇಲಾಖೆಯ ನಿಯಮಗಳನ್ನು ಧಿಕ್ಕರಿಸಿರುವುದಿಲ್ಲ ಇಲಾಖೆಯಲ್ಲಿ ನಿವೃತ್ತಿಯಾದರೂ ಕೂಡ ಅವರು ಅನೈತಿಕಾವಾಗಿ ವರ್ತಿಸಿರುವುದಿಲ್ಲ ಎಂದು ಹೇಳಿದರು.

ಹನುಮೇಶ ನಾಯುಕರವರು ಸರ್ಕಾರದ ಮಹತ್ವದ ಯೋಜನೆಗಳಾದ ಆಹಾರ ಧಾನ್ಯ ವಿತರಣೆಯಲ್ಲಿ ಉದ್ದೇಶಪೂರ್ವಕ ಅಕ್ರಮ, ಅರ್ಹ ಫಲಾನುಭವಿಗಳಿಗೆ ವಂಚನೆ ಹಾಗೂ ಅಧಿಕಾರ ದುರುಪಯೋಗ ನಡೆಸಲಾಗಿದೆ ಎಂದು ಹೇಳುತ್ತಿದ್ದಾರೆ ಅದು ಶುದ್ಧ ಸುಳ್ಳು. ನ್ಯಾಯ ಬೆಲೆ ಅಂಗಡಿಯ ಮಾಲೀಕರಿಗೆ ಸರಕಾರದಿಂದ ಎಷ್ಟು ಅಕ್ಕಿ ಬರುತ್ತದೆ ಅಷ್ಟು ಅಕ್ಕಿಯನ್ನು ಸಂಬಂಧಪಟ್ಟ ಅಧಿಕಾರಿಗಳು ನೀಡುತ್ತಿದ್ದಾರೆ. ಇದರಿಂದ ಜನರಿಗೆ ಬಹಳ ಅನುಕೂಲವಾಗುತ್ತಿದೆ. ಇದರಿಂದ ಬಡ ಹಾಗೂ ಶ್ರಮಿಕ ವರ್ಗದ ಜನರಿಗೆ ಅನುಕೂಲವಾಗುತ್ತಿದೆ.

ಶಿವಪ್ಪ ಹಳ್ಳಿ ಹೊಸೂರು ಅವರ ಮೇಲೆ ಉದ್ದೇಶ ಪೂರ್ವಕವಾಗಿ ಹನುಮೇಶ ನಾಯಕರವರು ಆರೋಪ ಮಾಡುತ್ತಿರುವುದು ಸರಿಯಲ್ಲ ಎಂದು ರಾಮಣ್ಣ ನಾಯಕ ಜಿಲ್ಲಾಧ್ಯಕ್ಷರು ನಾಯಕ ಆಗ್ರಹಿಸಿದರು.

# ಮಹಿಳೆಯರಿಗಾಗಿ ಉಚಿತ ಮಹಿಳಾ ಆರೋಗ್ಯ ತಪಾಸಣಾ ಶಿಬಿರ ಮಲ್ಲೈಕಾ ಅಮೀನ್

ಧೈರ್ಯದ ದಾರಿ



**ದೇವದುರ್ಗ,ಜ.28–**ತಾಲೂಕಿನ ನಾಗಡದಿನ್ನಿ ಗ್ರಾಮದಲ್ಲಿ ಉಚಿತವಾಗಿ ರಕ್ತದೊತ್ತಡ, ಮಧುಮೇಹ, ಕಣ್ಣು, ದಂತ, ಹಾಗೂ ಹೃದಯ ಸಂಬಂಧಿ ಕಾಯಿಲೆಗಳ ತಪಾಸಣೆ ನಡೆಸಿ ಅಗತ್ಯವಿರುವವರಿಗೆ ಉಚಿತವಾಗಿ ಔಷಧಿಗಳನ್ನು ವಿತರಿಸಿದರು. ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ರಾಮದುರ್ಗಾ ಮತ್ತು ಪಿಪಿಎಚ್‌ಎಫ್, ಪ್ರಣಾ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ,ಜಿಇ ಹೆಲ್ತ್‌ಕೇರ್ ಸಹಯೋಗದೊಂದಿಗೆ ಉಚಿತ ಮಹಿಳಾ ಆರೋಗ್ಯ ತಪಾಸಣಾ ಶಿಬಿರವನ್ನ ವ್ಯವಸ್ಥಾಪಕರು ಮಲ್ಲೈಕಾ ಅಮೀನ್ ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರು ಸದಾ ಸಂಸಾರದ ಜಂಜಾಟದಲ್ಲಿ ಕೃಷಿ ಕೆಲಸ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿರುತ್ತಾರೆ. ಆರೋಗ್ಯ ಸಮಸ್ಯೆಗಳನ್ನ ಹೇಳಿಕೊಳ್ಳದೇ ಆರೋಗ್ಯ ತಪಾಸಣೆಗೆ ಅಡೆತಡೆಗಳನ್ನು ಎದುರಿಸುತ್ತಾರೆ. ನಮ್ಮ ಸಂಸ್ಥೆಯು ಸರ್ಕಾರಿ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಮಹಿಳೆಯರ ಆರೋಗ್ಯ ಸೇವೆಗೆ ಮುಂದೆ ಬಂದಿದ್ದೇವೆ. ಆರೋಗ್ಯ ರಕ್ಷಣೆ ವಿಶೇಷವಾಗಿ ಕಾಳಜಿ ಕೊಡಬೇಕು, ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಎಲ್ಲಾ ಸಮಸ್ಯೆಗಳನ್ನ ಮುಕ್ತವಾಗಿ ವೈದ್ಯರಲ್ಲಿ ಹೇಳಿಕೊಳ್ಳಿ ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್‌ಗಳು ಮಹಿಳೆಯರಲ್ಲಿ ಸಾಮಾನ್ಯವಾಗಿ ಕಂಡುಬರುವ ಎರಡು ಕ್ಯಾನ್ಸರ್‌ಗಳಾಗಿವೆ , ಆದರೆ ನಿಯಮಿತ ತಪಾಸಣೆ, ಕ್ಲಿನಿಕಲ್ ಪರೀಕ್ಷೆಗಳು ಮತ್ತು ಜಾಗೃತಿಯ ಮೂಲಕ ಆರಂಭಿಕ ಪತ್ತೆಯು ಜೀವಗಳನ್ನು ಉಳಿಸಬಹುದು ಎಂದರು. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಮಹಾದೇವಪ್ಪ ಹೊಸಮನಿ ಇವರು ಮಾತನಾಡಿ ಉಚಿತ ಆರೋಗ್ಯ ಶಿಬಿರದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಬಿಪಿ ಶುಗರ್ ತಪಾಸಣೆ, ಎಚ್‌ಬಿ ತಪಾಸಣೆ, ಕಣ್ಣು ತಪಾಸಣೆ, ಹಲ್ಲು ತಪಾಸಣೆ,ಪೌಷ್ಟಿಕ ಆಹಾರದ ಬಗ್ಗೆ ಮಾಹಿತಿ, ಸ್ತ್ರೀ ರೋಗ ತಜ್ಞರಿಂದ ಮಹಿಳಾ ತಪಾಸಣೆ, ಹಮ್ಮಿಕೊಂಡಿದ್ದು ಈ ಒಂದು ಕಾರ್ಯಕ್ರಮದ ಸದುಪಯೋಗವನ್ನು ತಾವೆಲ್ಲರೂ ಪಡೆದುಕೊಳ್ಳಬೇಕಾಗಿ ತಿಳಿಸಿದರು.ನಂತರ ಪಿಡಿಒ ಮಲ್ಲಯ್ಯ ನಾಯಕ ಕಾರ್ಯಕ್ರಮ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಶಿಬಿರದಲ್ಲಿ ಉಚಿತ ಆಭಾ ಕಾರ್ಡ ಮಾಡುವುದರ ಜೊತೆಗೆ ಮಹಿಳೆಯರಿಗೆ ಮೆಹೆಂದಿಯನ್ನ ಹಾಕಲಾಯಿತು. ಈ ಕಾರ್ಯಕ್ರಮದಲ್ಲಿ ಮೆಡಿಕಲ್ ಆಫೀಸರ್ ಡಾ.ಮಹಾದೇವಪ್ಪ ಹೊಸಮನಿ, ದಂತವೈದ್ಯರು ನವನೀತ್ ,ಸ್ತ್ರೀ ವೈದ್ಯರು ವಿದ್ಯಾ, ಪಿಡಿಒ ಮಲ್ಲಯ್ಯ ನಾಯಕ,ನಾಗಡದಿನ್ನಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಬಸವರಾಜ,ಸಿಹೆಚ್‌ಒ ಪ್ರಶಾಂತ ಮತ್ತು ಶೃತಿ ಮಾಧವ್, ಆಶಾ ಕಾರ್ಯಕರ್ತೆಯರು ಸೇರಿದಂತೆ ಸಾರ್ವಜನಿಕರು ಪಾಲ್ಗೊಂಡಿದ್ದರು.

## ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ಎಸ್.ಐ.ಓ. ಮತ್ತು ಸಿ.ಇ.ಆರ್.ಎ ವತಿಯಿಂದ ಅಭಿಯಾನ: ಅಬುಬಕರ ಸಿದ್ದೀಕ್




ಧೈರ್ಯದ ದಾರಿ

**ಮಾನ್ವಿ,ಜ.28–** ಪಟ್ಟಣದ ಪತ್ರಿಕಾ ಭವನದಲ್ಲಿ ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಆಫ್ ಇಂಡಿಯಾ ರಾಜ್ಯ ಕಾರ್ಯದರ್ಶಿ ಅಬುಬಕರ ಸಿದ್ದೀಕ್ ಮಾತನಾಡಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ಎಸ್.ಐ.ಓ. ಮತ್ತು ಸೆಂಟರ್ ಫಾರ್ ಎಜುಕೇಷನಲ್ ರಿಸರ್ಚ್ ಮತ್ತು ಅನಾಲಿಸಿಸ್ ಸಹಯೋಗದಲ್ಲಿ ಫೆ.15 ರವರೆಗೆ ಕಲಿಕೆಯೇ ಕಲ್ಯಾಣ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು. ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ಕೊಪ್ಪಳ,ರಾಯಚೂರು, ಕಲಬುರಗಿ, ಯಾದಗಿರಿ, ಬೀದರ್,ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿನ ಸರ್ಕಾರಿ ಹಾಗೂ ಮೌಲಾನಾ ಆಜಾದ್ ಶಾಲೆಗಳಲ್ಲಿನ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತಮ ಸಾಧನೆಯನ್ನು ತೋರುವುದಕ್ಕೆ ಅಗತ್ಯ ಅರಿವು ಮೂಡಿಸುವುದು.ತರಬೇತಿಯನ್ನು ನೀಡುವುದು, ವಿಶೇಷವಾದ ಕ್ಯಾರಿಯರ್ ಆಕಾಡೆಮಿಗಳನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಕಲಿಕಾ ವಾತಾವರಣವನ್ನು ಮೂಡಿಸುವುದು ಸೇರಿದಂತೆ ವಿದ್ಯಾರ್ಥಿಗಳ ಅನುತೀರ್ಣ ಪ್ರಮಾಣವನ್ನು ಕಡಿಮೆ ಮಾಡುವುದಕ್ಕೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಕಾರ್ಯದರ್ಶಿ ಮಹಮ್ಮದ್ ಅಜೀಮ್, ಮಾನ್ವಿ ತಾ.ಅಧ್ಯಕ್ಷರಾದ ಅಜರ್, ಕಾರ್ಯದರ್ಶಿ ಮುಝಕಿರ್ ಇದ್ದರು.

# ಜ.31 ರಂದು ಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿಯವರ ಪುಣ್ಯಾರಾಧನೆ ಕಾರ್ಯಕ್ರಮ

ಧೈರ್ಯದ ದಾರಿ



**ಮಾನ್ವಿ,ಜ.28–** ಪಟ್ಟಣದ ಪತ್ರಿಕಾ ಭವನದಲ್ಲಿ ತಾಲೂಕು ಕುರುಬರ ಸಂಘದ ಅಧ್ಯಕ್ಷರಾದ ಸತ್ಯನಾ ರಾಯಣ ಆರ್. ಮುಸ್ಟೂರ್ ವಕೀಲರು ಮಾತ ನಾಡಿ ತಿಂಥಣಿ ಬ್ರಿಡ್ಜ್ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಶಾಖಾಮಠದಲ್ಲಿ ಜ.31 ರಂದು ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಶ್ರೀ ನಿರಾಂಜನ ನಂದಪುರಿ ಸ್ವಾಮಿಗಳ ನೇತೃತ್ವದಲ್ಲಿ ಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿಯವರ ಪುಣ್ಯಾರಾಧನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಕಾರ್ಯಕ್ರಮದಲ್ಲಿ ನಾಡಿನ 150 ಕ್ಕೂ ಶ್ರೀಗಳು ಜನಪ್ರತಿನಿಧಿಗಳು,ಗಣ್ಯರು ಭಾಗವಹಿಸಲಿ ದ್ದಾರೆ.ಫೆ.1 ರಂದು ನಡೆಯುವ ನುಡಿನಮನ ಕಾರ್ಯಕ್ರಮದಲ್ಲಿ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು, ಜಿಲ್ಲಾ ಉಸ್ತುವಾರಿ ಸಚಿವ ರಾದ ಡಾ.ಶರಣಪ್ರಕಾಶ ಪಾಟೀಲ್, ರಾಜ್ಯ ಸಚಿವರಾದ ಸತೀಶ ಜಾರಕಿಹೊಳ್ಳಿ,ಭೈರಾತಿ ಸುರೇಶ, ಎನ್.ಎಸ್.ಬೋಸರಾಜು, ಮಾಜಿ ಸಂಸದರಾದ ವಿರೂಪಾಕ್ಷಪ್ಪ, ಸೇರಿದಂತೆ ರಾಜ್ಯದ ಸಚಿವರು, ಶಾಸಕರು,ಜನಪ್ರತಿನೀಧಿಗಳು,ಗಣ್ಯರು ಭಾಗವಹಿಸ ಲಿದ್ದಾರೆ ಅದ್ದರಿಂದ ತಾಲೂಕಿನ ಸಮುದಾಯದ ವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಿದರು. ಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿಯವರ ಪುಣ್ಯಾರಾಧನೆ ಕಾರ್ಯಕ್ರಮದ ಭಿತ್ತಿ ಪತ್ರವನ್ನು ಬಿಡುಗಡೆಗೊಳಿಸಿದರು.ಶಿವಶಂಕರಗೌಡ ಬಾಗಲವಾಡ, ಭೀಮನಗೌಡ ಮುಸ್ಟೂರ್,ಈರಣ್ಣ ಮರ್ಲಟ್ಟಿ, ಮಹಾಂತೇಶ ಓಲೇಕಾರ್, ರಾಹುಲ್ ಕಲಂಗೇರ,ಅಜೇಯ್ ಕುಮಾರ್,ದುರುಗಪ್ಪ ತಡಕಲ್, ಚಂದ್ರಶೇಖರ್ ಬೈಲ್ ಮಾರ್ಚೆಡ್, ಮಾಳಿಂಗರಾಯ ಪಾತಾಪುರ, ಬಸವರಾಜ ಕನ್ನಾರಿ, ರವಿಕುಮಾರ ಇದ್ದರು.

# ಕಾರ್ಯಕ್ಷಮತೆ ಮೆಚ್ಚಿ ಉದ್ಬಾಳ(ಯು) ಪಿಡಿಓ ಬಸವರಾಜಗೆ ಜಿಲ್ಲಾ ಪಂಚಾಯತ್‌ದಿಂದ ಪ್ರಶಂಶನೀಯ ಪ್ರಮಾಣ ಪತ್ರ

ಧೈರ್ಯದ ದಾರಿ




**ರಾಯಚೂರು,ಜ.28–** ನಗರದ ಜಿಲ್ಲಾ ಪಂಚಾಯತಿಯ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಶ್ರೇಷ್ಠ ಸೇವೆಯನ್ನು ಗುರುತಿಸಿ, ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿ ತಿಂಗಳ ಕಾರ್ಯಕ್ಷಮತೆಯ ಆಧಾರದ ಮೇಲೆ ಅತ್ಯುತ್ತಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಎಂದು ಪ್ರಶಂಶನೀಯ ಪ್ರಮಾಣ ಪತ್ರ ನೀಡಲಾಗುತ್ತದೆ ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕಾಂದೂ ಅವರು ತಿಳಿಸಿದರು.
ನಗರದ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಜನವರಿ 28ರಂದು ನಡೆದ ನರೇಗಾ ಸೇರಿ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ, ಮಸ್ಕಿ ತಾಲ್ಲೂಕಿನ ಉದ್ಬಾಳ (ಯು) ಗ್ರಾಮ ಪಂಚಾಯತಿಯ ಡಿಸೆಂಬರ್–2025ರ ಮಾಹೆಯಲ್ಲಿ ವಿವಿಧ ಯೋಜನೆಗಳಲ್ಲಿ ಪ್ರಗತಿ ಸಾಧಿಸಿದ ಅತ್ಯುತ್ತಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಎಂದು ಆಯ್ಕೆಯಾದ ಬಸವರಾಜು ಅವರಿಗೆ ಪ್ರಶಂಶನೀಯ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ಬಸವರಾಜು ಅವರ ರೀತಿಯಲ್ಲಿ ಮುಂಬರುವ ದಿನಗಳಲ್ಲಿ ಮತ್ತೊಬ್ಬ ಪಿಡಿಓ ಅವರ ಕಾರ್ಯಕ್ಷಮತೆಯನ್ನು ಪರಿಗಣಿಸಿ ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿ ನೀಡುವುದರಿಂದ ಅವರು ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಲು ಉತ್ತೇಜನ ನೀಡಲಾಗುತ್ತದೆ ಎಂದರು.
ಇದೆ ವೇಳೆ ಜಿಲ್ಲಾ ಪಂಚಾಯತ್‌ನ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಮುಖ್ಯ ಲೆಕ್ಕಾಧಿಕಾರಿ ವಿಜಯಶಂಕರ್, ತಾಪಂಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

# ನಗರ ಡಿವೈಎಸ್ಪಿಯಾಗಿ ಐಪಿಎಸ್ ಅಧಿಕಾರಿ ಯಶ್ ಕುಮಾರ್ ಶರ್ಮಾ ನಿಯೋಜನೆ



**ಬಳ್ಳಾರಿ, ಜ.28:** ನಗರದ ಡಿವೈಎಸ್ಪಿಯಾಗಿ ಐಪಿಎಸ್ ಅಧಿಕಾರಿ ಯಶ್ ಕುಮಾರ್ ಶರ್ಮಾ ಅವರನ್ನು ಸರ್ಕಾರ ನಿಯೋಜನೆ ಮಾಡಿ ನಿನ್ನೆ ಆದೇಶ ಹೊರಡಿಸಿದೆ.

ನಗರದಲ್ಲಿ ಜ.1 ರಂದು ನಡೆದ ಬ್ಯಾನರ್, ಫೈರಿಂಗ್ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಶಾಸಕ ಜನಾರ್ಧನ ರೆಡ್ಡಿ ಆರೋಪದ ಕೇಂದ್ರ ಬಿಂದುವಾಗಿದ್ದ ನಗರ ಡಿವೈಸ್ಪಿ ಚಂದ್ರಕಾಂತ್ ನಂದಾರೆಡ್ಡಿ ಅವರನ್ನು ಸ್ಥಳ ನಿಯುಕ್ತಿಗೊಳಿಸದೆ ವರ್ಗಾವಣೆ ಮಾಡಲಾಗಿದೆ.

ಬ್ಯಾನರ್ ಗಲಾಟೆಯಿಂದಾಗಿ ಎಸ್ಪಿಯಾಗಿ ಬಂದಿದ್ದ ಪವನ್ ನೆಜ್ಜೂರ್, ಐಜಿಪಿ ವರ್ತಿಕಾ ಕಟಿಯಾರ್ ಅವರ ವರ್ಗಾವಣೆ ಮಾಡಲಾಗಿತ್ತು.

ಜ.1 ರಂದು ಬ್ಯಾನರ್ ಗಲಾಟೆ ನಡೆದ ಬಳಿಕ ನಡೆಸಿದ ಸರಣಿ ಸುದ್ದಿಗೋಷ್ಠಿಗಳಲ್ಲಿ ಗಂಗಾವತಿ ಶಾಸಕ ಜಿ.ಜನಾರ್ಧನ ರೆಡ್ಡಿ, ಮಾಜಿ ಸಚಿವ ಬಿ.ಶ್ರೀರಾಮುಲು, ಮಾಜಿ ಶಾಸಕ ಜಿ.ಸೋಮಶೇಖರ ರೆಡ್ಡಿ ಸೇರಿ ಹಲವರು ನಗರ ಡಿವೈಎಸ್ ಪಿ ಚಂದ್ರಕಾಂತ್ ನಂದಾರೆಡ್ಡಿ ವಿರುದ್ಧ ನೇರವಾಗಿ ಆರೋಪಿಸುತ್ತಿದ್ದರು. ಗಲಾಟೆ ಮುನ್ನ ಎಸ್ ಪಿ ಸರ್ಕಲ್ ನಿಂದ ರೆಡ್ಡಿ ಮನೆ ಬಳಿಗೆ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರನ್ನು ನಂದಾರೆಡ್ಡಿಯವರೇ ಕುಮ್ಮಕ್ಕು ನೀಡಿ ಕರೆತಂದಿದ್ದಾರೆ. ಅವರನ್ನು ಮೊದಲು ಬಂಧಿಸಬೇಕು ಎಂದು ಆಪಾದಿಸಿದ್ದರು. ಈ ಕುರಿತು ಡಿವೈಎಸ್ ಪಿ ನಂದಾರೆಡ್ಡಿ, ಎಎಸ್ ಪಿ ರವಿಕುಮಾರ್ ವಿರುದ್ಧ ಜನಾರ್ಧನ ರೆಡ್ಡಿಯವರು ಪ್ರತ್ಯೇಕ ದೂರನ್ನು ಸಹ ನೀಡಿದ್ದರು.

ಆದರೆ, ಸಂಬಂಧಪಟ್ಟ ಠಾಣೆಯ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಳ್ಳದೆ, ಹಿಂಬರಹ ನೀಡಿದ್ದರು. ಆದರೂ, ಬಿಡದೆ ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸುವುದಾಗಿಯೂ ತಿಳಿಸಿದ್ದರು.ಇನ್ನು ಮಾಜಿ ಸಚಿವ ಬಿ.ಶ್ರೀರಾಮುಲು ಅವರು, ನಿರಂತರವಾಗಿ ನಂದಾರೆಡ್ಡಿ ವಿರುದ್ಧ ಆರೋಪ ಮಾಡುವುದರ ಜೊತೆಗೆ, ನಗರದ ಎಪಿಎಂಸಿ ಆವರಣದಲ್ಲಿ ನಡೆದ ಬಿಜೆಪಿ ಪ್ರತಿಭಟನಾ ಸಮಾವೇಶದಲ್ಲಿ ಡಿವೈಎಸ್ ಪಿ ಚಂದ್ರಕಾಂತ್ ನಂದಾರೆಡ್ಡಿ ವಿರುದ್ಧ ರೋಷಾವೇಷ, ಆಕ್ರೋಶದಿಂದ ಮಾತನಾಡಿದ್ದರು. ನಂದಾರೆಡ್ಡಿ ಹೆಸರು ಉಲ್ಲೇಖಿಸುತ್ತಾ ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ನಮ್ಮ ಬಿಜೆಪಿ ಸರ್ಕಾರ ಬರಲಿದೆ. ನೀವು ವರ್ಗಾವಣೆಯಾಗಿ ಎಲ್ಲೇ ಇದ್ದರೂ, ನಿವೃತ್ತಿಯಾಗಿದ್ದರೂ ಬಿಡಲ್ಲ ಎಂದು ಎಚ್ಚರಿಸಿದ್ದರು. ಅಲ್ಲದೇ ಗಲಾಟೆ ಸಂಬಂಧ ಎಸ್ ಪಿ ಪವನ್ ನೆಜ್ಜೂರ್ ಅವರನ್ನು ಅಮಾನತು ಮಾಡಿದಾಗಲೂ, ಘಟನೆಗೆ ಕಾರಣರಾದ ಚಂದ್ರಕಾಂತ್ ನಂದಾರೆಡ್ಡಿಯನ್ನು ಅಮಾನತು ಮಾಡಬೇಕಿತ್ತು ಎಂದು ರೆಡ್ಡಿ, ರಾಮುಲು ಆಪಾದಿಸಿದ್ದರು.ಇದೀಗ ರಾಜ್ಯ ಸರ್ಕಾರ, ನಗರ ಡಿವೈಎಸ್ ಪಿ ಚಂದ್ರಕಾಂತ್ ನಂದಾರೆಡ್ಡಿ ಅವರನ್ನು ಸ್ಥಳ ತೋರಿಸದೆ ವರ್ಗಾವಣೆ ಮಾಡಿದ್ದು, ಅವರ ಸ್ಥಾನಕ್ಕೆ ನೂತನ ಐಪಿಎಸ್ ಅಧಿಕಾರಿ ಯಶ್ ಕುಮಾರ್ ಶರ್ಮಾ ಅವರನ್ನು ನಿಯೋಜಿಸುವ ಮೂಲಕ ಬ್ಯಾನರ್ ಗಲಾಟೆ ಸಂಬಂಧ ಮೂರನೇ ಅಧಿಕಾರಿಯನ್ನು ವರ್ಗಮಾಡಿದಂತೆ ಆಗಿದೆ.

# ಹೊಸ ಯರಗುಡಿ ಸರ್ಕಾರಿ ಶಾಲೆ ರಕ್ಷಿಸಲು ಆಗ್ರಹಿಸಿ ವಿದ್ಯಾರ್ಥಿಗಳ ಪೋಷಕರ ಪ್ರತಿಭಟನೆ




**ಬಳ್ಳಾರಿ, ಜ.28:** ತಾಲೂಕಿನ ಹೊಸ ಯರಗುಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ರಕ್ಷಿಸಲು ಆಗ್ರಹಿಸಿ ವಿದ್ಯಾರ್ಥಿಗಳ ಪೋಷಕರ ಪ್ರತಿಭಟನೆ ಶಾಲೆಯ ಹತ್ತಿರ ಎಐಡಿಎಸ್ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ನಡೆಯಿತು.

ಪ್ರತಿಭಟನೆ ಉದ್ದೇಶಿಸಿ ಎಐಡಿಎಸ್ ಜಿಲ್ಲಾ ಉಪಾಧ್ಯಕ್ಷರಾದ ಶಾಂತಿಯವರು ಮಾತನಾಡಿ ಹೊಸ ಯರಗುಡಿ ಸರ್ಕಾರಿ ಪ್ರಾಥಮಿಕ ಶಾಲೆ ಬಡವರಿಗೆ ಇರುವುದು ಇದು ಒಂದೇ ಸರ್ಕಾರಿ ಶಾಲೆ. ಈ ಶಾಲೆಯನ್ನು ಮುಚ್ಚಿ ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಹೋಗಬೇಕೆಂದರೆ 5 ವರ್ಷದ ಮಕ್ಕಳು ಒಂದು ಕಿಲೋ ಮೀಟರ್ ದೂರ ಹೇಗೆ ಹೋಗಬೇಕು? ಜೊತೆಗೆ ಅಲ್ಲಿನ ಜನರು ಶಾಲೆಯ ಕಟ್ಟಡ ಸರಿ ಇಲ್ಲದಿದ್ದಾಗ ಊರಿನ ಜನರೆಲ್ಲರೂ ಸೇರಿ ಶಾಲೆಯ ರಸ್ತೆ ಸರಿ ಮಾಡಬೇಕೆಂದು ಹೋರಾಟ ಮಾಡಿದರು ಹಾಗೆಯೇ ಇಲ್ಲಿ 8ನೇ ತರಗತಿ ವರೆಗೂ ಶಾಲೆ ಸಹ ಮಾಡಬೇಕೆಂದು ಬೇಡಿಕೆ ಸಹ ಇಟ್ಟರು.ಹಾಗೆಯೇ ಇಲ್ಲಿ ವಾಸಿಸುವ ಜನರೆಲ್ಲರೂ ದುಡಿಯುವ ರೈತರು, ಕಾರ್ಮಿಕರು. ಬಡವರ ಮಕ್ಕಳು 150ಕ್ಕೂ ಹೆಚ್ಚು ಅಧಿಕ ಸಂಖ್ಯೆಯಲ್ಲಿ ದಾಖಲಾತಿ ಇರುವ ಸರ್ಕಾರಿ ಶಾಲೆ ಮುಚ್ಚಬಾರದು ಎಂಬುದು ಪೋಷಕರು ಆಗ್ರಹವಾಗಿದೆ.

ನಮ್ಮ ದೇಶದ ಮಹಾನ್ ಮಾನವತಾವಾದಿ ಜ್ಯೋತಿರಾವ್ ಫುಲೆ ಮತ್ತು ಸಾವಿತ್ರಿ ಬಾಯಿ ಫುಲೆ ಅವರು ಇಡೀ ಜೀವನವನ್ನು ಶಿಕ್ಷಣಕ್ಕಾಗಿ ದುಡಿದು, ಶೋಷಿತರಿಗೆ, ದಲಿತರಿಗೆ ಮತ್ತು ಹೆಣ್ಣು ಮಕ್ಕಳಿಗೆ ಅಕ್ಷರ ಕ್ರಾಂತಿಯ ಹರಿಕಾರರಾದರು. ಭಗತ್ ಸಿಂಗ್, ನೇತಾಜಿ ಅವರ ಕನಸು, "ಸ್ವಾತಂತ್ರ್ಯ ನಂತರ ದೇಶದಲ್ಲಿ ಹುಟ್ಟಿದ ಪ್ರತಿಯೊಬ್ಬ ಮಗುವಿಗೂ ಶಿಕ್ಷಣ ನೀಡುವುದು ಸರ್ಕಾರದ ಜವಾಬ್ದಾರಿ" ಎಂದು ಸಾರಿದರು.

ಅಧಿಕಾರದ ಚುಕ್ಕಾಣಿ ಹಿಡಿದ ಎಲ್ಲಾ ಸರ್ಕಾರಗಳು ಬಡ ಮಕ್ಕಳಿಂದ ಶಿಕ್ಷಣವನ್ನು ಕಿತ್ತುಕೊಂಡು, ಸಮಾಜವನ್ನು ಇನ್ನೂಷ್ಟು ಕತ್ತಲೆ ಕೋಣೆಯಲ್ಲಿ ಹಾಕುತ್ತಿದ್ದಾರೆ.

ಆದ್ದರಿಂದ ಸಾರ್ವಜನಿಕ ಶಿಕ್ಷಣ ಉಳಿಸಿ ಜನರ ಸಮಿತಿ ನೇತೃತ್ವದಲ್ಲಿ ಸರ್ಕಾರಿ ಶಾಲೆಗಳನ್ನು ರಕ್ಷಿಸಿ, ಬಲಪಡಿಸಲು ಪ್ರಬಲ ಹೋರಾಟ ಕಟ್ಟಬೇಕು. ಹಾಗೂ ಶಿಕ್ಷಣವನ್ನು ಖಾಸಗೀಕರಣ ಮಾಡುತ್ತಿರುವ ಎಲ್ಲಾ ಸರ್ಕಾರಗಳ ವಿರುದ್ಧ ಜಾತಿ, ಧರ್ಮ ಬೇಧಬಾವವಿಲ್ಲದೆ ಎಲ್ಲಾರು ಒಂದಾಗಿ ಮತ್ತೊಂದು ನವೋದಯ ಚಳುವಳಿ ಕಟ್ಟಲು ಮುಂದಾಗಬೇಕು ಎಂದು ಕರೆ ನೀಡಿದರು.

ಈ ಪ್ರತಿಭಟನೆಯ ಜಿಲ್ಲಾ ಕಾರ್ಯದರ್ಶಿ ಕಂಬಳಿ ಮಂಜುನಾಥ ,ಎಐಡಿಎಸ್ ಸದಸ್ಯರಾದ ಕಾಂತೇಶ್, ತಿಪ್ಪೇಸ್ವಾಮಿ, ಎಸ್.ಡಿ.ಎಮ್.ಸಿ ಅಧ್ಯಕ್ಷರು ನಾಗಮ್ಮ ಹಾಗೂ ಊರಿನ ಸರ್ಕಾರಿ ಶಾಲೆ ಉಳಿಸುವ ಸಮಿತಿ ಅಧ್ಯಕ್ಷರು ಪಾರ್ವತಿ ಕಾರ್ಯದರ್ಶಿ ಅಂಬಣ್ಣ, ಸದಸ್ಯರಾದ ಶೇಖರ್, ಪೋತಪ್ಪ, ಲಕ್ಷ್ಮಮ್ಮ,ಹಾಗೂ ಹಿರಿಯರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ವಿಬಿ ಜಿ ರಾಮ್ ಜಿ ವಿರೋಧಿಸಿ ಎ ಐ ಕೆ ಕೆ ಎಂ ಎಸ್ ರಾಜ್ಯವ್ಯಾಪಿ ಪ್ರತಿಭಟನೆ




**ಬಳ್ಳಾರಿ, ಜ.28:** 'ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) ಮಸೂದೆ– 2025 (ವಿಬಿಜಿ ಆರ್ ಎ ಎಮ್ ಜಿ) ಕೂಡಲೇ ಹಿಂತೆಗೆದುಕೊಳ್ಳಬೇಕು ಎಂದು ಎ ಐ ಕೆ ಕೆ ಎಂ ಎಸ್ ರೈತ ಸಂಘಟನೆ ನೇತೃತ್ವದಲ್ಲಿ ಕೂಲಿ ಕಾರ್ಮಿಕರು ಇಂದು ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ಮಾಡಿ, ಜಿಲ್ಲಾಧಿಕಾರಿಗಳ ಮೂಲಕ ಮಾನ್ಯ ಪ್ರಾಧಾನಿಯವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಅಧ್ಯಕ್ಷ ಗೋವಿಂದ್ ಮಾತನಾಡುತ್ತಾ ಗ್ರಾಮೀಣ ಜನತೆಗೆ ಉದ್ಯೋಗ ಖಾತ್ರಿಪಡಿಸುವ ಉದ್ದೇಶದಿಂದ ತಂದಿದ್ದ ಎಂಜಿ ನರೇಗಾ ಕಾಯ್ದೆಯ ಬದಲಿಗೆ 'ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) ಮಸೂದೆ– 2025 ಅನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿರುವ ಕೇಂದ್ರ ಬಿಜೆಪಿ ಸರ್ಕಾರದ ಹೀನ ಪ್ರಯತ್ನವನ್ನು ನಾವು ಉಗ್ರವಾಗಿ ಖಂಡಿಸುತ್ತೇವೆ.

ಈ ಮಸೂದೆಯು ಎಂಜಿ ನರೇಗಾ ಕಾಯ್ದೆಯನ್ನು ಮತ್ತು ಅದರಲ್ಲಿದ್ದ ಉದ್ಯೋಗದ ಶಾಸನಬದ್ಧ ಖಾತ್ರಿಯನ್ನು ತೆಗೆದುಹಾಕುವುದು ಹಾಗೂ ಅದರ ಬದಲಿಗೆ ಗ್ರಾಮೀಣ ಬಡ ಕುಟುಂಬಗಳಿಗೆ ಕೇಂದ್ರ ಸರ್ಕಾರದ ಯೋಜನೆಯ ಅನುಷ್ಠಾನದ ಖಾತ್ರಿ ನೀಡುವುದಾಗಿದೆ, ಯೋಜನೆಯ ಕುರಿತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರಗಳ ಯಾವುದೇ ಪಾತ್ರವನ್ನು ನಿರಾಕರಿಸುತ್ತಾ, ಕೇಂದ್ರ ಸರ್ಕಾರಕ್ಕೆ ಸಂಪೂರ್ಣ ಅಧಿಕಾರ ನೀಡಿ, ಒಕ್ಕೂಟ ವ್ಯವಸ್ಥೆ ಅಡಿಪಾಯವನ್ನು ನಾಶಗೊಳಿಸುವ ಪ್ರಯತ್ನವಾಗಿದೆ. ಹಾಗೆಯೇ, ಕೇಂದ್ರ ಬಿಜೆಪಿ ಸರ್ಕಾರವು ತನ್ನ ಹಣಕಾಸಿನ ಜವಾಬ್ದಾರಿಯನ್ನು ಶೇ.60 ಕ್ಕೆ (ಹಿಂದೆ ಶೇ.100) ಇಳಿಸುವುದು ಮತ್ತು ಅದರ ಶೇ.40 ರಷ್ಟು ಹೊರೆಯನ್ನು ರಾಜ್ಯ ಸರ್ಕಾರಗಳಿಗೆ ವರ್ಗಾಯಿಸುವುದಾಗಿದೆ, ಹಾಗಾಗಿ ಇದನ್ನು ನಾವು ವಿರೋಧಿಸುತ್ತೇವೆ ಎಂದರು

ಪ್ರತಿಭಟನೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯದರ್ಶಿ ಗುರಳ್ಳಿ ರಾಜ ಅವರು ಮಾತನಾಡುತ್ತಾ ಜಾಬ್ ಕಾರ್ಡ್‌ಗಳನ್ನು ಸುಧಾರಣೆ ಮಾಡುವ ಘೋಷಣೆಯ ಮೂಲಕ ಗ್ರಾಮೀಣ ಜನರನ್ನು ಉದ್ಯೋಗದ ಹಕ್ಕಿನಿಂದ ವಂಚಿತರನ್ನಾಗಿ ಮಾಡುವುದು ಈ ಯೋಜನೆಯ ಭಾಗವಾಗಿದೆ.

ಈಗ ಗ್ರಾಮೀಣ ಬಡ ಜನತೆಗೆ ಹೆಚ್ಚು ಹೆಚ್ಚು ಉದ್ಯೋಗಗಳನ್ನು ಒದಗಿಸುವುದು ಈ ಘಳಿಗೆಯ ಅವಶ್ಯಕತೆ ಮತ್ತು ಈ ಕಾರ್ಯ ಕೇಂದ್ರ ಸರ್ಕಾರದ ಜವಾಬ್ದಾರಿ ಆಗಿರುವಾಗ, ಈ ಕೇಂದ್ರ ಬಿಜೆಪಿ ಸರ್ಕಾರ ಅದಕ್ಕೆ ಸಂಪೂರ್ಣವಾಗಿ ವಿರುದ್ಧ ಗತಿಯಲ್ಲಿ ನಡೆದಿದೆ.

ಈ ಪ್ರಸ್ತಾಪಿತ ಮಸೂದೆಯು ಗ್ರಾಮೀಣ ಬಡ ಜನತೆಯ ಬದುಕುವ ಹಕ್ಕಿನ ಮೇಲಿನ ದಾಳಿ ಆಗಿರುವುದರಿಂದ ಅದನ್ನು ತೀವ್ರವಾಗಿ ಖಂಡಿಸುತ್ತೇವೆ. ಹಾಗೆಯೇ ಪ್ರತಿ ಕುಟುಂಬಕ್ಕೆ 200 ದಿನ ಕೆಲಸ, 600 ರೂ ಕೂಲಿ ವಿತರಿಸಬೇಕು.

ಕೇಂದ್ರ ಬಿಜೆಪಿ ಸರ್ಕಾರದ ಈ ಜನ ವಿರೋಧಿ, ಕಾರ್ಮಿಕ ವರ್ಗ ವಿರೋಧಿ ಪ್ರಯತ್ನವನ್ನು ಸೋಲಿಸಲು ಕೊನೆಯವರೆಗೂ ಹೋರಾಡಲು ಮುಂದೆ ಬರಬೇಕೆಂದು ದುಡಿಯುವ ಜನರಿಗೆ ಎ ಐ ಕೆ ಕೆ ಎಂ ಎಸ್ ನಾಯಕರು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಘದ ಸದಸ್ಯರಾದ ಕಾಸಿಂ ಸಾಬ್, ಮಲ್ಲೇಶ್, ಹರೀಶ್, ಬಸವನ ಗೌಡ, ಹನುಮಂತ, ಪ್ರಮೋದ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕಾರಂಜಾ ಸಂತ್ರಸ್ತರಿಗೆ ಕಾಲಮಿತಿಯಲ್ಲಿ ಪರಿಹಾರ ಬಿಡುಗಡೆಗೆ ಖಂಡ್ರೆಯವರಿಗೆ ಸಂತ್ರಸ್ತರ ಸಮಿತಿಯ ಆಗ್ರಹ

**ಬೀದರ್:ಜ.28:**ಕಾರಂಜಾ ಮುಳುಗಡೆ ಸಂತ್ರಸ್ತರಿಗೆ ಮಾನವೀಯತೆಯ ಮಾನದಂಡ ಹಾಗೂ ವೈಜ್ಞಾನಿಕ ಆಧಾರದ ಮೇಲೆ ಸಮರ್ಪಕ ಪರಿಹಾರ ನೀಡಬೇಕು ಎಂಬ ಬೇಡಿಕೆಗೆ ಸಂಬಂಧಿಸಿ ರಾಜ್ಯ ಸರ್ಕಾರ ರಚಿಸಿರುವ ಉನ್ನತ ಮಟ್ಟದ ತಾಂತ್ರಿಕ ಸಮಿತಿಯ ವರದಿಯನ್ನು ಆಧರಿಸಿ, ಸಂತ್ರಸ್ತರಿಗೆ ಕಾಲಮಿತಿಯಲ್ಲಿ ಪರಿಹಾರ ಹಣ ಬಿಡುಗಡೆ ಮಾಡಬೇಕು ಎಂದು ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿಯು ಒತ್ತಾಯಿಸಿದೆ.



ಕಾರಂಜಾ ಸಂತ್ರಸ್ತರ ದೀರ್ಘಕಾಲದ ಹೋರಾಟವನ್ನು ಪರಿಗಣಿಸಿ, ರಾಜ್ಯ ಸರ್ಕಾರವು ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ತಾಂತ್ರಿಕ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯ ಅಧಿಕೃತ ವರದಿಯನ್ನು ಡಿಸೆಂಬರ್ 2025ರ ಅಂತ್ಯದಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ವರದಿ ಈಗಾಗಲೇ ಸರ್ಕಾರದ ಕೈ ಸೇರಿದೆ. ಈ ಹಿನ್ನೆಲೆಯಲ್ಲಿ ತಕ್ಷಣ ಕ್ರಮ ಕೈಗೊಂಡು ಸಂತ್ರಸ್ತರಿಗೆ ಪರಿಹಾರ ವಿತರಿಸಬೇಕೆಂದು ಅರಣ್ಯ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆಯವರಿಗೆ ಸಂತ್ರಸ್ತರ ಸಮಿತಿಯು ಆಗ್ರಹಿಸಿದೆ.

ರವಿವಾರ ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿ ಹಾಗೂ ಬೀದರ್ ಜಿಲ್ಲಾ ಸಮಗ್ರ ಅಭಿವೃದ್ಧಿ ಜಂಟಿ ಕ್ರಿಯಾ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಪಾಟೀಲ ಹುಚಕನಳ್ಳಿ ಅವರ ನೇತೃತ್ವದ ನಿಯೋಗವು ಭಾಲ್ಕಿಯಲ್ಲಿರುವ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆಯವರ ನಿವಾಸಕ್ಕೆ ಭೇಟಿ ನೀಡಿ ಮನವಿ ಪತ್ರವನ್ನು ಸಲ್ಲಿಸಿತು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸೇರಿದಂತೆ ಸಂಬಂಧಪಟ್ಟ ಸಚಿವರು ಕಾಲಮಿತಿಯಲ್ಲಿ ಸಂತ್ರಸ್ತರ ಬೇಡಿಕೆಗೆ ಸ್ಪಂದಿಸಿ ಸಮರ್ಪಕ ಪರಿಹಾರ ಒದಗಿಸಲು ವಿಶೇಷ ಮುತುವರ್ಜಿ ವಹಿಸಬೇಕೆಂದು ಮನವಿ ಮಾಡಲಾಯಿತು.

ಸಂತ್ರಸ್ತರ ಮನವಿಯನ್ನು ಸ್ವೀಕರಿಸಿ ಮಾತನಾಡಿದ ಸಚಿವ ಈಶ್ವರ ಖಂಡ್ರೆಯವರು, ಕಾರಂಜಾ ಸಂತ್ರಸ್ತರ ಸಮಸ್ಯೆಯ ಬಗ್ಗೆ ತಾವು ವಿಶೇಷ ಕಾಳಜಿ ವಹಿಸಿ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ರಾಜಪ್ಪ ಕಮಲಪೂರೆ, ಡಾ. ರಾಜಶೇಖರ ರಂಜೋಳ, ಮಾದಪ್ಪ ಕೌದೆ, ಇಸೂಫಮಿಯಾ ರೇಕುಳಗಿ, ಮಹಮ್ಮದ್ ಸೋಲಾಪೂರೆ, ಮಹೇಶ್ ಕಮಲಪೂರೆ, ಚಂದ್ರಶೇಖರ ಮುತ್ತಣ್ಣ, ಶಂಕರೆಪ್ಪ ಮೂಲಗಿ, ಶ್ರೀಮತಿ ಲಕ್ಷ್ಮೀ ಕೌದೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವೃಂದ, ನೇಮಕಾತಿ ನಿಯಮ ಬದಲಾವಣೆಗೆ ಸರ್ಕಾರದ ಮೇಲೆ ಒತ್ತಡ

**ಬೀದರ್:ಜ.28:** ನೌಕರರ ವೃಂದ ಮತ್ತು ನೇಮಕಾತಿ ನಿಯಮ ಬದಲಾವಣೆಗೆ ರಾಜ್ಯ ಸರ್ಕಾರದ ಮೇಲೆ ಒತ್ತಡ ತರಲಾಗುವುದು ಎಂದು ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಗ್ರೂಪ್ ಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷ ನವೀನ್ ಎಸ್.ಆರ್. ಹೇಳಿದರು.



ನಗರದ ಮನ್ನಳ್ಳಿ ರಸ್ತೆಯಲ್ಲಿ ಇರುವ ಟೀಚರ್ಸ್ ಕಾಲೊನಿಯ ಗುರುನಾನಕ ಪಬ್ಲಿಕ್ ಸ್ಕೂಲ್‌ನಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಗ್ರೂಪ್ ಡಿ ನೌಕರರ ಸಂಘದ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ, ರಾಜ್ಯ ಪದಾಧಿಕಾರಿಗಳ ಅಭಿನಂದನೆ ಹಾಗೂ ನಿವೃತ್ತ ಬೋಧಕೇತರ ನೌಕರರ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಬಹಳ ವರ್ಷಗಳಿಂದ ವೃಂದ ಹಾಗೂ ನೇಮಕಾತಿ ನಿಯಮ ಬದಲಾವಣೆ ಆಗಿಲ್ಲ. ನಿಯಮ ಬದಲಾವಣೆಯಾದರೆ ನೌಕರರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಕಲಬುರಗಿ ವಿಭಾಗದಲ್ಲಿ ಇಲಾಖೆಯ ಬೋಧಕೇತರ ನೌಕರರ ಬಡ್ತಿಯಲ್ಲಿ ವಿಳಂಬ ಆಗುತ್ತಿದ್ದು, ಈ ಬಗ್ಗೆ ಮೇಲಧಿಕಾರಿಗಳ ಗಮನ ಸೆಳೆಯಲಾಗುವುದು. ಕೂಡಲೇ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಜಕ್ಕಾ ಮಾತನಾಡಿ, ಸಂಘ ಇಲಾಖೆಯ ನೌಕರರ ಹಿತರಕ್ಷಣೆಗೆ ಶ್ರಮಿಸಲಿದೆ ಎಂದು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ (ಆಡಳಿತ) ಎಚ್.ಜಿ. ಸುರೇಶ್, ಡಯಟ್ ಪ್ರಾಚಾರ್ಯ ಗುರುಪ್ರಸಾದ್, ಸಂಘದ ರಾಜ್ಯ ಗೌರವಾಧ್ಯಕ್ಷ ದೇವರಾಜು ಜಿ, ಸಂಘದ ಜಿಲ್ಲಾ ಘಟಕದ ಗೌರವಾಧ್ಯಕ್ಷ ಪ್ರಕಾಶ ಟಾಳೆ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಸಿ.ಬಿ. ಹಳ್ಳದ, ವೆಂಕಟೇಶ ಗೂಡಾಳ, ಬಿ.ಜೆ. ರಂಗೇಶ್, ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಬಸವಂತರಾಯ ಜಿಡ್ಡೆ, ಶಿಕ್ಷಣಾಧಿಕಾರಿ ಓಂಕಾರ ಶಿವರಾಯ, ಸಮಗ್ರ ಶಿಕ್ಷಣ ಇಲಾಖೆಯ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ ಸಂಗ್ರಾಮಪ್ಪ ಖಂಡಾಳೆ ಮುಖ್ಯ ಅತಿಥಿಯಾಗಿದ್ದರು.

ಪೃಥ್ವಿಕುಮಾರ ಟಿ., ಆದೆಪ್ಪ ಬಾಗ್ಲಿ, ಆನಂದ ಕೆ.ಬಿ., ವಿನಯಪ್ರಸಾದ್, ಕಾಮರೆಡ್ಡಿ, ಮಲ್ಲಿನಾಥ ಮಂಗಲಗಿ, ಇಮ್ಯಾನುವೇಲ್, ಶಿವಕುಮಾರ ಫುಲಾರಿ, ಗುರುಸಿದ್ದಪ್ಪ ಶರಣಬಸಪ್ಪ ಮತ್ತಿತರರು ಉಪಸ್ಥಿತರಿದ್ದರು.

# 127.5 ಕೋಟಿ ರೂ ವೆಚ್ಚದಲ್ಲಿನಗರದ ರಸ್ತೆಗಳ ಅಭಿವೃದ್ಧಿ: ಮಂಜುನಾಥ

**ಬಳ್ಳಾರಿ,ಜ.28–** ನಗರದಲ್ಲಿ ಬಹುತೇಖ ಕುಣಿಗಳಿಂದಲೇ ಕೂಡಿರುವ ರಸ್ತೆಗಳನ್ನು ಜನ, ವಾಹನಗಳ ಸೂಕ್ತ ಸಂಚಾರಕ್ಕೆ ಅನುಕೂಲವಾಗುವಂತೆ ಮಾಡಲು 127.5 ಕೋಟಿ ರೂಗಳ ವೆಚ್ಚದ ಯೋಜಬೆ ಸಿದ್ದಪಡಿಸಿದೆ ಎಂದು ಪಾಲಿಕೆಯ ಆಯುಕ್ತ ಪಿ.ಎಸ್.ಮಂಜುನಾಥ ಹೇಳಿದ್ದಾರೆ.ಸುದ್ದಿಗಾರರೊಂದಿಗೆ ಮಾತನಾಡಿದ ಅವರು ನಗರದ ರಸ್ತೆಗಳ ಹಾಳಾಗಿರುವ ಬಗ್ಗೆ ಅನೇಕ ದೂರುಗಳು ಬಂದಿವೆ, ಅನೇಕ ಸಂಘಟನೆಗಳು ಪ್ರತಿಭಟನೆ ಮಾಡಿದ್ದವು.ಕುಣಿಗಳಿಂದ ಕೂಡಿದ ನಗರದ 105 ರಸ್ತೆಗಳನ್ನು ಗುರುತಿಸಿದೆ. ಅವುಗಳನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಸಾಲ ಯೋಜನೆಯಡಿ ರಾಜ್ಯ ಸರ್ಕಾರವು ಮಹಾತ್ಮಾಗಾಂಧಿ ನಗರ ವಿಕಾಶ ಯೋಜನೆಯಡಿ 127.5 ಕೋಟಿ ರೂ ವೆಚ್ಚದಲ್ಲಿ ಅಗಲೀಕರಣ, ಅಭಿವೃದ್ಧಿ, ಮರು ಡಾಂಬರೀಕರಣ ಮಾಡಲಿದೆ. ಬಳ್ಳಾರಿ ನಗರ ಕ್ಷೇತ್ರ ವ್ಯಾಪ್ತಿಯಲ್ಲಿ 87.5 ಕೋಟಿ ರೂ ಮತ್ತು ಬಳ್ಳಾರಿ ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ನಗರದ ರಸ್ತೆಗಳನ್ನು 40 ಕೋಟಿ ರೂ ವೆಚ್ಚದಲ್ಲಿ ಅಭಿವೃದ್ಧಿಗೆ ಕೈಗೆತ್ತಿಕೊಳ್ಳಲಾಗುತ್ತಿದೆ. ಈಗಾಗಲೇ ಕೆಲವು ರಸ್ತೆಗಳ ಕಾಮಗಾರಿಗೆ ಭೂಮಿಪೂಜೆ ಮಾಡಿದೆ, ಹಲವು ರಸ್ತೆಗಳ ಕಾಮಗಾರಿ ಆರಂಭಿಸಲು ವರಗಕ್ ಆರ್ಡರ್ ನೀಡಿದೆ. ಸಧ್ಯದಲ್ಲೇ ಕಾಮಗಾರಿಗಳು ಆರಂಭವಾಗಲಿವೆ ಎಂದು ಹೇಳಿದರು.

# ಒಳಮೀಸಲಾತಿ ವಿರುದ್ಧ ಕಾನೂನು ಹೋರಾಟ ಅಗತ್ಯ: ಬಂಜಾರ ಸಮಾಜ ಒಂದಾಗಿಪಂಚಾಯಿತಿ ಕಟ್ಟೆಗಳಲ್ಲೇ ನ್ಯಾಯ ಪಡೆದುಕೊಳ್ಳಿ

**ವಾಡಿ:ಜ.28**: ಜೀವನದಲ್ಲಿ ಏನೇ ಸಮಸ್ಯೆಗಳು ಎದುರಾದರೂ ಕೋರ್ಟು, ಪೊಲೀಸ್ ಕಚೇರಿಗಳಿಗೆ ಅಲೆಯದೆ ಪಂಚಾಯಿತಿ ಕಟ್ಟೆಗಳಲ್ಲೇ ನ್ಯಾಯ ಬಗೆಹರಿಸಿಕೊಳ್ಳಬೇಕು ಎಂದು ಚಿತ್ತಾಪುರ ಸಿವಿಲ್ ನ್ಯಾಯಾಲಯದ ಮಾಜಿ ನ್ಯಾಯಮೂರ್ತಿ, ಜೆಡಿಎಸ್ ಮುಖಂಡ ಸುಭಾಷ್ ರಾಠೋಡ ಹೇಳಿದರು.

ಸೋಮವಾರ ಪಟ್ಟಣದ ಸೇವಾಲಾಲ ಭವನದಲ್ಲಿ ಬಂಜಾರಾ (ಲಂಬಾಣಿ) ಸಮಾಜದ ವತಿಯಿಂದ ಏರ್ಪಡಿಸಲಾಗಿದ್ದ 84 ತಾಂಡಾಗಳ ನಾಯಕ, ಕಾರಬಾರಿ, ಢಾವ್ ಮುಖಂಡರ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಕೌಟುಂಬಿಕ ಕಲಹಗಳು, ಜಾಮೀನು ತಕರಾರುಗಳು, ಆಸ್ತಿ ಕಿರಿಕಿರಿಗಳು, ಕ್ಷುಲ್ಲಕ ಕಾರಣಕ್ಕೆ ನಡೆಯುವ ಜಗಳ ಪ್ರಕರಣಗಳನ್ನು ನ್ಯಾಯಾಲಯದವರೆಗೆ ತೆಗೆದುಕೊಂಡು ಹೋದ ಅಸಂಖ್ಯ ವ್ಯಾಜ್ಯಗಳು ಅಂತಿಮ ತೀರ್ಪು ಕಾಣದೆ ಉಳಿದಿವೆ. ಕೆಲವು ಪ್ರಕರಣಗಳು ಮೂವತ್ತು ನಲವತ್ತು ವರ್ಷಗಳಾದರೂ ಇತ್ಯರ್ಥವಾಗಿಲ್ಲ. ಸಂತ್ರಸ್ತರು ವಕೀಲರಿಗೆ ಮತ್ತು ಪೊಲೀಸರಿಗೆ ಹಣ ಸುರಿದು ಹಾಳಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹೀಗಾಗಿ ಒಂದೇ ತಾಸಿನಲ್ಲಿ ಸಮಸ್ಯೆ ಬಗೆಹರಿಸಬಹುದಾದ ಗ್ರಾಮ ನ್ಯಾಯಾಲಯಗಳನ್ನೇ ಜನರು ಆಶ್ರಯಿಸಬೇಕು. ಈ ಹಿಂದೆ ಊರಿನ ಹಿರಿಯರು ನಡೆಸುತ್ತಿದ್ದ ಪಂಚಾಯಿತಿ ಕಟ್ಟೆ ನ್ಯಾಯದಂತೆ ಗ್ರಾಮಕ್ಕೊಂದು ಗ್ರಾಮ ನ್ಯಾಯಾಲಯ ಜಾರಿಗೆ ತರುವ ಮೂಲಕ ಸರ್ಕಾರ ಪಂಚಾಯಿತಿ ಪಂಚರಿಗೆ ಗೌರವ ಸಂಭಾವನೆ ನೀಡಬೇಕು ಎಂಬ ವಾದ ಮುಂದಿಟ್ಟು ನಾನು




ಕಾನೂನು ಹೋರಾಟ ಆರಂಭಿಸಿದ್ದೇನೆ. ಜನರು ಇದನ್ನು ಬೆಂಬಲಿಸಬೇಕು ಎಂದರು. ನಮ್ಮ ಸಮಾಜ ಇತಿಹಾಸ ಉಳ್ಳ ಸಮಾಜ ನಮ್ಮ ನ್ಯಾಯಲಯದಲ್ಲಿ ಬಗೆಹರಿಯದೆ ನ್ಯಾಯ ಬಗೆಹರಿಸುತ್ತದೆ ಇಂತಹ ಪವಿತ್ರ ವಾದ ಸಮಾಜ ನಮ್ಮ ಸಮಾಜ ನಮ್ಮ ಹಕ್ಕು ಕೇಳ್ಳುತ್ತಿದೆ ವಿನಃ ಸರಕಾರಕ್ಕೆ ಭಿಕ್ಷೆ ಅಲ್ಲ ಡಾ ಬಾಬಾ ಸಾಹೇಬ ಅಂಬೇಡ್ಕರ್ ಕೊಟ್ಟಿರುವ ಸಂವಿಧಾನ ಅದರ ಹಕ್ಕು ನಮ್ಗೆ ಕೊಡಿ ಅಂಬೇಡ್ಕರ್ ಸಾಹೇಬ್ರು ಬರೆದಿರುವ ಸಂವಿಧಾನ ಎಲರನು ಹಕ್ಕು ಸಿಗಲಿ ಬಡವರಿಗೆ ಹಾಗು ದಿನ ದಲಿತರಿಗೆ ಸಮಾನತೆ ಸಿಗಲಿ ಎಂದು ಅವರು ಬರೆದಿದ್ದಾರೆ ಆದರೆ ಈಗಿನ ಸರಕಾರ ತಮ್ಮ ಸ್ವಾರ್ಥಕಾಗಿ ಒಬ್ಬರಿಗೆ ನ್ಯಾಯ ಇನೊಬರಿಗೆ ಅನ್ಯಾಯ ಮಾಡುತ್ತಿದೆ ತಾರತಮ್ಯ ಮಾಡುತ್ತಿದೆ ಜಾತಿ ಜಗಳ ಹಚ್ಚು ತಿವೆ ನಮ್ಮ ಸಮಾಜ ದುಡಿದು ತಿನ್ನುವ ಸಮಾಜ ಯಾರಿಗೆ ದೋಸಿಸುವ ಸಮಾಜ ಅಲ್ಲ ತಮ್ಮ ಹಕ್ಕು ತಮಗೆ ಬೇಕು ಎನ್ನುವ ರೀತಿಯಲ್ಲಿ ಕೇಳ್ಳುತ್ತಿವೆ ಇಲ್ಲ ಅಂದರೆ ಕಾನೂನು ಹೋರಾಟಕ್ಕೆ ಸಿದ್ದ ಎಂದು ಸರಕಾರ ಎಚ್ಚರಿಕೆ ನೀಡಿದರು

ನಿವೃತ್ತ ಸಿಪಿಐ ಕೃಷ್ಣಪ್ಪ ಕಲ್ಲೆದೇವರು ಮಾತನಾಡಿ, ರಾಜ್ಯ ಸರ್ಕಾರ ಜಾರಿಗೆ ತರಲು ಮುಂದಾಗಿರುವ ಒಳಮೀಸಲಾತಿ ಕಾಯ್ದೆಯಿಂದ ಬಂಜಾರಾ ಸಮುದಾಯಕ್ಕೆ ತೊಂದರೆಯಾಗಲಿದೆ. ಶಿಕ್ಷಣ ಮತ್ತು ಉದ್ಯೋಗ ಸೌಲಭ್ಯಗಳಿಂದ ಬಂಜಾರಾ ಸಮುದಾಯಕ್ಕೆ ಮೋಸವಾಗಲಿದೆ. ಒಳಮೀಸಲಾತಿ ವಿರುದ್ಧ ಬೀದಿ ಹೋರಾಟ ನಡೆಸಿದರೆ ನ್ಯಾಯ ಸಿಗುವುದಿಲ್ಲ. ಬದಲಿಗೆ ಕೇಸ್ ದಾಖಲಿಸಿ ಹಿಂಸೆ ನೀಡುತ್ತಾರೆ. ಆದ್ದರಿಂದ ನಾವೆಲ್ಲರೂ ಪಕ್ಷಬೇಧ ಮರೆತು ಒಗ್ಗಟ್ಟಾಗಬೇಕು. ಸರ್ಕಾರ ಯಾವುದೇ ಪಕ್ಷದ್ದಿರಲಿ ಅನ್ಯಾಯ ಪ್ರಶ್ನೆ ಮಾಡಲು ಹಿಂಜರಿಯಬಾರದು. ಕಾನೂನು ಹೋರಾಟದಿಂದ ಮಾತ್ರ ಒಳಮೀಸಲಾತಿ ಜಾರಿಯನ್ನು ತಡೆಯಬಹುದು ಎಂದು ಎಚ್ಚರಿಸಿದರು.

ಸಾನಿಧ್ಯ ವಹಿಸಿದ್ದ ಹಲಕರಟಿ ಸಿದ್ದೇಶ್ವರ ಹಿರೇಮಠದ ಶ್ರೀ ರಾಜಶೇಖರ ಸ್ವಾಮೀಜಿ ಆಶೀರ್ವಚನ ನೀಡಿದರು. ಶ್ರೀ ಠಾಕೂರ ಮಹಾರಾಜ, ಬಂಜಾರಾ ಸಮಾಜದ ಅಧ್ಯಕ್ಷ ರಮೇಶ ಕಾರಬಾರಿ, ಪ್ರಧಾನ ಕಾರ್ಯದರ್ಶಿ ಸೋಮನಾಥ ಚವ್ಹಾಣ, ಗೋರ್ ಬಂಜಾರಾ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಬಾಳಾಸಾಹೇಬ ರಾಠೋಡ, ಸೇವಾಲಾಲ್ ಜಯಂತ್ಯುತ್ಸವ ಅಧ್ಯಕ್ಷ ಪೊ?ಮು ರಾಠೋಡ, ಮುಖಂಡರಾದ ಬಿ.ಬಿ.ನಾಯಕ, ವಿಠ್ಠಲ್ ವಾಲ್ಮೀಕಿ ನಾಯಕ, ರಾಮಚಂದ್ರ ರಾಠೋಡ, ಸುರೇಶ ರಾಠೋಡ, ಸೋಮಸಿಂಗ್ ರಾಠೋಡ, ಹಣಮಂತ ಚೌವ್ಹಾಣ, ಅಂಬಾದಾಸ ಜಾಧವ, ತುಕಾರಾಮ ರಾಠೋಡ, ಕಿಶನ ಜಾಧವ ಸೇರಿದಂತೆ ವಿವಿಧ ತಾಂಡಾಗಳ ಮುಖಂಡರು ಪಾಲ್ಗೊಂಡಿದ್ದರು. ಸಂಜೀವ್ ರಾಠೋಡ ನಿರೂಪಿಸಿ, ವಂದಿಸಿದರು.

# ಪತ್ರಕರ್ತ ದಿ. ನಾಗಶೆಟ್ಟಿ ಧರಂಪುರಗೆ ಮರಣೋಪರಾಂತ ಜಿಲ್ಲಾಡಳಿತದಿಂದ ಪ್ರಶಸ್ತಿ



**ಬೀದರ : ಜ.28:** ಬಹುಮುಖ ಪ್ರತಿಮೆ ಪತ್ರಕರ್ತ ,ಕವಿ, ಹಾಡುಗಾರ, ಜನಪರ ಹೋರಾಟಗಾರ, ಕನ್ನಡಪರ ಹೋರಾಟ ಗಾರ, ದಿ. ನಾಗಶೆಟ್ಟಿಯಅವಿರತ ನಾಲ್ಕು ದಶಕದ ಪರಿಶ್ರಮಕ್ಕೆ ಜಿಲ್ಲಾಡಳಿತದಿಂದ ಗಣರಾಜ್ಯೋತ್ಸವದಂದು ನೇಹರುಕ್ರೀಡಾಂಗ ಣದಲ್ಲಿ ಪರೇಡ ನಂತರ ದಿ. ನಾಗಶೆಟ್ಟಿಧರಂಪುರಅವರಧರ್ಮ ಪತ್ನಿಯಾದ ಶ್ರೀಮತಿ ಲಕ್ಷ್ಮೀಗಂಡ ನಾಗಶೆಟ್ಟಿಧರಂಪುರಅವರಿಗೆ ಜಿಲ್ಲಾಉಸ್ತುವಾರಿ ಸಚಿವರಾದ ಶ್ರೀಮಾನ ಈಶ್ವರ ಬಿ. ಖಂಡ್ರೆಯವರು ಶಾಲು ಹೊದಿಸಿ ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಿದರು. ದಿ. ನಾಗಶೆಟ್ಟಿಧರಂಪುರಕನ್ನಡ ಸಾಹಿತ್ಯ ಪರಿಷತ್ತಿನಗೌರವ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.ಪ್ರಭುರಾವ ಕಂಬಳಿವಾಲೆ ಪ್ರತಿಷ್ಠಾನದಅಧ್ಯಕ್ಷರಾಗಿ ನಿರಂತರ 12 ವರ್ಷ ಕಾಲ ಕನ್ನಡ ಕಾರ್ಯಕ್ರಮಗಳು ನಡೆಸಿಕೊಟ್ಟವರು, ಬೀದರಜಿಲ್ಲೆಯ ಮೊದಲ ಕನ್ನಡ ಸಂಘಟನೆಯಾದ ಬೀದರಜಿಲ್ಲಾ ಬರಹಗಾರರ ಮತ್ತುಕಲಾ ವಿದರ ಸಂಘದ ಕಾರ್ಯದರ್ಶಿಯಗಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಕಾರ್ಯನಿರತ ಪತ್ರರ್ಕರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದು ಅವಿಸ್ಮರಣಿಯ. ಪ್ರಸುತ್ತಜಿಲ್ಲಾಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು ಅಕಾಲಿಕ ಹೃದಯಘಾತಕ್ಕೆ ಸೇವೆ ನಿಲ್ಲಿಸಿದ್ದು ಪತ್ರಿಕಾರಂಗಕ್ಕೆತುಂಬಲಾರದಷ್ಟು ಹಾನಿಯಾಗಿದೆ.

ಬೀದರಜಿಲ್ಲಾ ವಿಕಾಸ ವೇದಿಕೆಯಉಪಾಧ್ಯರಾಗಿ, ಕರ್ನಾಟಕರಕ್ಷಣಾ ವೇದಿಕೆಯಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು, ಜಿಲ್ಲಾ ಸಮಗ್ರಅಭಿವೃದ್ಧಿ ಹೋರಾಟ ಸಮಿತಿಯಲ್ಲೂ ಮತ್ತುಜಿಲ್ಲೆಯ ಅನೇಕ ಸಂಘ ಸಂಸ್ಥೆಗಳಲ್ಲಿ ಸಮರ್ಪಿಸಿಕೊಂಡ ದೀಪದಂತೆಉರಿದ ದಿ. ಮಾಗಶೆಟ್ಟಿಧರಮಪುರಗ್ರಿನಿನೋಬಲ್ಸ್ ಸುದ್ದಿ ಮೂಲ, ಉತ್ತರಕರ್ನಾಟಕ, ಪಬ್ಲಿಕ್, ಜನದನಿ, ಪತ್ರಿಕೆಗಳಲ್ಲಿ ವರದಿಗಾರರಾಗಿ ವರದಿಗಳು ಮಾಡಿಜನಮನ್ನಣೇ ಗಳಿಸಿದವರು ,ಕ್ರಾಂತಿ ಭೂಮಿ ವಾರ ಪತ್ರಿಕೆ 1992ರಲ್ಲಿ ಪ್ರಾರಂಭಿಸಿದರು. ಇತ್ತೀಚಿಗೆ ಶರಣ ಭೂಮಿಕನ್ನಡ ದಿನ ಪತ್ರಿಕೆ ಪ್ರಾರಂಭಿಸಿದ ಹೆಗ್ಗಳಿಕೆ ಅವರದಾಗಿತ್ತು. ಬುತ್ತಿ ಬಸವಣ್ಣದೇವಸ್ಥಾನದಅಭಿವೃದ್ಧಿಗೂ ಹಗಲಿರುಳು ದುಡಿದರು. ಬುತ್ತಿ ಬಸವಣ್ಣದೇವಾಲಯ ಬಳಿ ತೆರೆದ ವಿಶಾಲವಾದ ಬಾವಿಯು ಬಸವಾದಿ ಶರಣರು ಮತ್ತು ಮೇದಾರಕೇತ್ತಯ್ಯನವರು ತೋಡಿದ ಬಾವಿ ಎಂದುದೇವಾಲಯದ ಸುತ್ತಲುಇತ್ತೀಚಿಗೆ ನೂತನ ಬಡಾವಣೆಯಾಗಿ ಬಹುಮಹಡಿಗಳು ತಲೆಎತ್ತಿದ್ದವು, ಮನೆಯವರಿಗೆ ಬೋರವೆಲ್ ಹಾಕದಂತೆತಡೆಯುತ್ತಿದ್ದರುಎಂತಹ ಪ್ರತಿಷ್ಠತ ವ್ಯಕ್ತಿಗಳಾಗಿದ್ದರು ಜಗ್ಗುತಿರಲಿಲ್ಲ, ಬೋರ ಹಾಕುವುದರಿಂದ ಬಸವಾದಿ ಶರಣರುತೋಡಿದ ಬಾವಿಯ ನೀರು ಬತ್ತ ಬಹುದುಎಂದು ಊಹಿಸಿ ಜಿಲ್ಲಾಡಳಿತಕ್ಕೂ ಸಹ ತಲೆನೋವು ಆಗಿದ್ದರು.

ದಿ. ನಾಗಶೆಟ್ಟಿಧರಂಪುರ ಈ ಕಾರ್ಯಕಕ್ಕೆಇನ್ನು ಮುಂದೆ ಬಸವಾದಿ ಶರನರ ಅನುಯಾಯಿಗಳ ಅಭಿಮಾನಿಗಳ ಮತ್ತು ಜಿಲ್ಲಾಡಳಿತದ ಹೆಗಲ ಮೇಲಿದೆ.ಈ ಜವಾಬ್ದಾರಿ.ಸೌಬಾರ ಸಮೀಪ ಇರುವ ಶ್ರೀ ಮಹಾಸಿದ್ಧ ಮಡಿವಾಳೇಶ್ವತ ದೇವಾಲಯದಅಧ್ಯಕ್ಷರಾಗಿ ಶ್ರಾವಣ ಮಾಸದಲ್ಲಿ ನಿರಂತರ ಭಜನೆಕಾರ್ಯಕ್ರಮ ನಡೆಸಿಕೊಡುತ್ತಿದ್ದರು. ವರ್ಷಕ್ಕುಮ್ಮೆ ಪಲ್ಲಕ್ಕಿ, ಜಾತ್ರೆ ನಡೆಸುತ್ತಿದ್ದರುಜಿಲ್ಲೆಯ ಹೊರಗಿನ ಮತ್ತುಜಿಲ್ಲೆಯ ಸಾಧು ಸಂತರಜೊತೆಗೂ ನಿಕಟವಾದ ಬಾಂಧವ್ಯ ಹೊಂದಿದ್ದವರು ನಾಗಶೆಟ್ಟಿಇನ್ನಲ್ಲಎಂಬುವುದು ನುಂಗಲಾರದತುತ್ತಾಗಿದೆ. ಇಂತಹ ಧಿಮಂತ ವ್ಯಕ್ತಿಯ ವ್ಯಕ್ತಿತ್ವಕ್ಕೆ ಗುರಿತಿಸಿ ಜಿಲ್ಲಾಡಳಿತ ಮರಣೋಪರಾಂತ ಪಶಸ್ತಿ ನೀಡಿದಕ್ಕೆ ದಿ. ನಾಗಶೆಟ್ಟಿ ಧರಂಪುರ ಗೆಳೆಯರ ಬಳಗ ಜಿಲ್ಲಾಡಳಿತಕ್ಕೆ ಸಿದ್ರಾಮಪ್ಪ ಮಾಸಿ ಮಾಡೆ, ಸದಾನಂದಜೋಷಿ,ಸರ್ಕಾರಿ ನೌಕರರ ಸಂಘದಜಿಲ್ಲಾದ ಅಧ್ಯಕ್ಷರು, ಸೋಮಶೇಖರ ಬಿರಾದರರಮೇಶ ಬಿರಾದಾರ, ಶಾಂತಕುಮಾರಉದಗೀರೆ , ರಘುಶಂಕ ಭಾತಂಬ್ರಾ, ನಾಗಶೆಟ್ಟಿ ಪಾಟೀಲ ಗಾದಗಿ, ಸತ್ಯಮೂರ್ತಿ, ಗಣಪತಿ ಹಜನಾಳ, ಗುರುಸಿದ್ದಪ್ಪ ಮಾಮಾ, ಸಿದ್ದರೆಡ್ಡಿ ನಾಗೂರ, ಡಾ. ಅಶೋಕಕುಮಾರ ನಾಗೂರೆಡಾ. ಸಿ ಆನಂದರಾವ, ಬಕ್ಕಪ ನಾಗೂರೆ, ರೇವಣಸಿದ್ದಪ್ಪ ಜಾಲದೆ, ಶಶಿ ಹೊಸಳ್ಳಿ, ಅನಂತರೆಡ್ಡಿ, ಭಗವಂತ ನೌಬಾದಕರ್, ಭೀಮರಾವ ಬೀದರಕರ್, ಶಿವಕುಮಾರ ಸದಲಾಪೂರೆ, ಗಾದಗಿ, ವಿಜಯಕುಮಾರಅಷ್ಟೂರೆ, ಸುನೀಲ ಭಾವಿಕಟ್ಟಿ , ವಿಜಯಕುಮಾರ ಸೋನಾರೆ, ಅಭಿನಂದನೆಜಗದೀವಿ ಪಂಡರಗೆರ , ಪಾರ್ವತಿ ಸೋನಾರೆ, ರೇಣುಕಾ ಮಳ್ಳಿ, ಜಯದೇವಿ ಯದಲಾಪೂರೆ ಪ್ರತಿಭಾಚಾಮಾ, ರಾಣಿ ಸತ್ಯಮೂರ್ತಿ, ರೂಪಾ ಪಾಟೀಲ, ಸ್ವರೂಪರಾಣಿ ನಾಗೂರ ಶಿವರಾಜ ಕಪಲಾಪೂರೆ, ಬಸವರಾಜ ಮಯೂರ, ಧನರಾಜಧರಂಪುರ, ಬಸವರಾಜ ಹರಳೆ, ಉಮಾಕಾಂತ ಮೀಸೆ, ಜಗದೇಶ್ವರ ಬಿರಾದಾರ, ಓಂಪ್ರಕಾಶರೊಟ್ಟೆಸಲ್ಲಿಸಿದರು.

ಈಸಂದರ್ಭದಲ್ಲಿಲೋಕಸಭಾಸದಸ್ಯರಾದಸಾಗರಈಶ್ವರಖಂಡ್ರೆ, ಬೀದರದಕ್ಷಿಣಶಾಸಕಡಾ.ಶೈಲೇಂದ್ರಬೆಲ್ದಾಳೆ, ವಿಧಾನಪರಿಷತ್ಸದಸ್ಯರಾದಮಾರುತಿರಾವಮೂಳೆ, ಬೀದರನಗರಸಭೆಅಧ್ಯಕ್ಷರಾದ ಮಹ್ಮದಗೌಸ್, ಬೀದರನಗರಾಭಿವೃದ್ಧಿಪ್ರಾಧಿಕಾರದ ಅಧ್ಯಕ್ಷಬಸವರಾಜಜಾಬಶೆಟ್ಟಿ, ಜಿಲ್ಲಾಧಿಕಾರಿಶಿಲ್ಪಾಶರ್ಮಾ, ಜಿಲ್ಲಾಪಂಚಾಯತ ಮುಖ್ಯಕಾರ್ಯನಿರ್ವಾಹಕಅಧಿಕಾರಿಡಾ॥ ಗಿರೀಶ್ಬದೋಲೆ, ಜಿಲ್ಲಾ ಪೊಲೀಸ್ವರಿಷ್ಠಾಧಿಕಾರಿಪ್ರದೀಪಗುಂಟಿ, ಬೀದರಮಹಾ ನಗರ ಪಾಲಿಕೆ ಆಯುಕ್ತ ಮುಕುಲ್ಜೈನ್ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸೇರಿದಂತೆಹಲವಾರು ಜನರು ಉಪಸ್ಥಿತರಿದ್ದರು

# 24 ಗಂಟೆಯೊಳಗೆ ಕೊಲೆ ಆರೋಪಿಗಳ ಬಂಧನ



**ಕಲಬುರಗಿ,ಜ.28**–ನಗರದ ಮೋಹನ್ ಲಾಡ್ಜ್ ಹತ್ತಿರವಿರುವ ಅಪ್ಪರ್ ಲೈನ್ ಗಾರ್ಡನ್‌ನಲ್ಲಿ ಈಚೆಗೆ ಹಮಾಲವಾಡಿಯ ಸೈಯ್ಯದ್ ಮಹೆಬೂಬ್ ಎಂಬಾತನನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು 24 ಗಂಟೆಯೊಳಗೆ ಬಂಧಿಸುವಲ್ಲಿ ಸ್ಟೇಷನ್ ಬಜಾರ್ ಪೊಲೀಸರು ಯಶಸ್ವಿಯಾಗಿದ್ದಾರೆ.

ಅಪ್ಪರ್ ಲೈನ್ ಹಮಾಲವಾಡಿಯ ಆನಂದ ತಂದೆ ಜಲಕ್ ಸಿಂದೆ (34), ಅಶಿತೋಷ್ ತಂದೆ ಜಲಕ್ ಸಿಂದೆ (30), ಇಮ್ರಾನ್ ತಂದೆ ಮಹೆಬೂಬ್ ಶೇಖ್ (28) ಮತ್ತು ಸೋಹೆಬ್ ತಂದೆ ಅನ್ವರ್ ಖುರೇಷಿ (30) ಎಂಬುವವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಸೈಯ್ಯದ್ ಮಹೆಬೂಬ್ ಜೊತೆಗೆ ಸೋಯಬ್ ಖುರೇಷಿ, ಆನಂದ ಸಿಂದೆ, ಅಶಿತೋಷ್ ಸಿಂದೆ ಮತ್ತು ಇಮ್ರಾನ್ ಅವರು ತಂಟೆ, ತಕರಾರು ಮಾಡಿಕೊಂಡಿದ್ದರು. ಇದೇ ವೈಷಮ್ಯದ ಹಿನ್ನೆಲೆಯಲ್ಲಿ ಆತನನ್ನು ಜ.21 ರಂದು ಬೆಳಗಿನಜಾವ ಅಪ್ಪರ್ ಲೈನ್ ಗಾರ್ಡನ್‌ನಲ್ಲಿ ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಲಾಗಿತ್ತು. ಈ ಸಂಬಂಧ ಸೈಯ್ಯದ್ ಮಹೆಬೂಬ್ ಅವರ ತಂದೆ ಸೈಯ್ಯದ್ ಇಸ್ಮಾಯಿಲ್ ಅವರು ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು.

ಈ ದೂರಿನ ಅನ್ವಯ ಪ್ರಕರಣದ ತನಿಖೆಗೆ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಅವರ ಮಾರ್ಗದರ್ಶನದಲ್ಲಿ ಡಿಸಿಪಿ ಪ್ರವೀಣ್ ಹೆಚ್.ನಾಯಕ್, ದಕ್ಷಿಣ ಉಪ–ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಶರಣಬಸಪ್ಪ ಸುಬೇದಾರ, ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ಗುರುಲಿಂಗಪ್ಪಗೌಡ ಸುಬೇದಾರ ಅವರ ನೇತೃತ್ವದಲ್ಲಿ ಎಎಸ್‌ಐ ಶಿವಶರಣಪ್ಪ, ಸಿಬ್ಬಂದಿಗಳಾದ ಪ್ರಲ್ಹಾದ ಕುಲಕರ್ಣಿ, ಪ್ರಭಾಕರ್, ಜ್ಯೋತಿ, ಯಲ್ಲಪ್ಪ, ಜೋಸಿನ್, ಸಂಗಣ್ಣ, ಮಲ್ಲಣ್ಣ, ಶಿವಲಿಂಗಪ್ಪ, ಶಿವರಾಜ ಸಿಂದೆ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ಕೊಲೆ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

# ರಾಮಲಿಂಗೇಶ್ವರ ಮಠದ ಉದ್ಘಾಟನೆ ಅಂಗವಾಗಿ ಪ್ರಚಾರ ರಥಕ್ಕೆ ಚಾಲನೆ

**ತಾಳಿಕೋಟೆ:ಜ.28:** ತಾಲೂಕಿನ ಚಬನೂರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸಿದ್ದಿ ಪುರುಷ ಶ್ರೀ ರಾಮಲಿಂಗೇಶ್ವರ ಮಠದ ಹಾಗೂ ಸಭಾ ಭವನದ ಉದ್ಘಾಟನಾ ಕಾರ್ಯಕ್ರಮದ ಅಂಗವಾಗಿ ಫೇಬ್ರವರಿ 3 ರಿಂದ 8ರವರೆಗೆ ನಡೆಯಲಿರುವ ವಿವಿಧ ಕಾರ್ಯಕ್ರಮಗಳ ಕುರಿತಂತೆ ಪ್ರಚಾರ ರಥಕ್ಕೆ ನೂತನಮಠದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಕೊಡೇಕಲ್ಲ ದುರದುಂಡೇಶ್ವರ ಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಚಾಲನೆ ನೀಡಿದರು. ಈ ಸಮಯದಲ್ಲಿ ಮಾತನಾಡಿದ ಶ್ರೀಗಳು ಫೇಬ್ರವರಿ 3 ರಂದು ರೈತ ಜನೋತ್ಸವ, 4 ರಂದು ಯೋದರಿಗೆ ಹಾಗೂ ಚಬನೂರು ಸರ್ಕಾರಿ ನೌಕರರಿಗೆ ಮತ್ತು ಸಾಧಕರಿಗೆ ಸನ್ಮಾನ, 5 ರಂದು ಮಹಿಳೆಯರಿಗಾಗಿಯೇ ಒಂದು ವಿಶೇಷವಾದ ಮಾತೃ ನಮನ ಕಾರ್ಯಕ್ರಮ ನಡೆಯಲಿದೆ ಕಲ್ಬುರ್ಗಿಯ ಶ್ರೀ ಶರಣ ಬಸವೇಶ್ವರ ಮಹಾ ಸಂಸ್ಥಾನ ಪೀಠದ ಚಿ.ಶ್ರೀ ದೊಡ್ಡಬಸಪ್ಪ ಅಪ್ಪನವರ ಸಾನಿದ್ಯದಲ್ಲಿ ಹಾಗೂ ಮಾತೋಶ್ರೀ ದ್ರಾಕ್ಷಾಯಿಣಿ ಅಮ್ಮನವರ ಸಾನಿದ್ಯದಲ್ಲಿ ಸುಮಾರು 5 ಸಾವಿರ ತಾಯಂದಿರರಿಗೆ ಉಡಿ ತುಂಬುವ ಬೃಹತ್ ಕಾರ್ಯಕ್ರಮ ನಡೆಯಲಿದೆ, ದಿ. 6 ರಂದು ದೇಶದ ಅಭಿವೃದ್ದಿಯಲ್ಲಿ ಯುವಜನತೆ ಪಾತ್ರ ಕುರಿತಂತೆ ಯುವಜನೋತ್ಸವವನ್ನು ಹಮ್ಮಿಕೊಳ್ಳಲಾಗಿದೆ 7 ರಂದು ಶ್ರೀಮದ್ ಉಜ್ಜಯಿನಿ ಸದ್ಧರ್ಮ ಮಹಾ ಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಡಾ.ಸಿದ್ದಲಿಂಗ ರಾಜ ದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದಂಗಳವರ ಅಡ್ಡ ಫಲ್ಲಕ್ಕಿ ಮಹೋತ್ಸವ ಜರುಗಲಿದೆ. ದಿ. 8 ರಂದು ಸಿದ್ದಿಪುರುಚ ಶ್ರೀ ರಾಮಲಿಂಗೇಶ್ವರರ ನೂತನ ಮಠದ ಹಾಗೂ ಸಭಾ ಭವನದ ಉದ್ಘಾಟನೆ ಕಾರ್ಯಕ್ರಮ ಜರುಗಲಿದೆ. ಈ ಕಾರ್ಯಕ್ರಮದಲ್ಲಿ ನಾಡಿನ ಅನೇಕ ಸಂತರು ಅಲ್ಲದೇ ಘನ ಸರ್ಕಾರದ ಸಚೀವರು, ರಾಜಕೀಯ ರಾಜ್ಯ ಮುಖಂಡರುಗಳು, ಶಾಸಕರು, ಅಲ್ಲದೇ ಇನ್ನು ಅನೇಕ ಮೇದಾವಿಗಳು ಸಹ ಪಾಲ್ಗೊಳ್ಳಲಿದ್ದು ಈ ಕಾರ್ಯಕ್ರಮದ ಯಶಸ್ವಿಗಾಗಿ ಪ್ರಚಾರರಥವನ್ನು ಸಿದ್ದಪಡಿಸಿ ಜಿಲ್ಲೆಯ ವಿವಿಧ ಭಾಗಗಳಲ್ಲಿ



ಸಂಚರಿಸಲು ಪ್ರಚಾರ ಕೈಗೊಳ್ಳಲು ರಥಕ್ಕೆ ಚಾಲನೆ ನೀಡಲಾಗಿದೆ ಎಂದರು. ಈ ಸಮಯದಲ್ಲಿ ದೇವರ ಹಿಪ್ಪರಗಿ ಜಡಿಮಠದ ಶ್ರೀ ಜಡಿಸಿದ್ದೇಶ್ವರ ಮಹಾಸ್ವಾಮಿಗಳು, ನಾವದಗಿ ಮಠದ ಶ್ರೀ ರಾಜೇಂದ್ರಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳು, ಪರದೇಶಿಮಠದ ಶ್ರೀ ಶಿವಯೋಗಿ ಮಹಾಸ್ವಾಮಿಗಳು ಚಬನೂರ ಸಿದ್ದಿ ಪುರುಷ ಶ್ರೀ ರಾಮಲಿಂಗೇಶ್ವರ ಮಠದ ಶ್ರೀ ರಾಮಲಿಂಗಯ್ಯ ಮಹಾಸ್ವಾಮಿಗಳು, ಗ್ರಾಮದ ಮುಖಂಡರಾದ ಬಸನಗೌಡ ಪಾಟೀಲ, ಸೋಮನಗೌಡ ಪಾಟೀಲ, ಸಂಗನಗೌಡ ಕೊಳೂರ, ಮಂಜುನಾಥ ಕವಡಿಮಟ್ಟಿ, ಒಳಗೊಂಡು ಚಬನೂರ ಗ್ರಾಮದ ಮುಖಂಡರು, ಮಹಿಳೆಯರು, ಮೊದಲಾದವರು ಉಪಸ್ಥಿತರಿದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE